ಹಿಂದೂ ದೇಶದ ವಿದ್ಯಾಭ್ಯಾಸ

T. 44
N22
1463.

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

To The Editor "Sahityaparishatpatrika"
For favour of immediate Review.

ಶ್ರೀ BANGALORE KARNATAKA SAHITYA PARISHAT

gl. No. 110

1463

೮ 153

**Vidyavilasa Series No. 2.**

ವಿದ್ಯಾವಿಲಾಸ ಗ್ರಂಥಮಾಲೆ ಸಂಖ್ಯೆ ೨.

# EDUCATION IN INDIA

***(Past and Present)***

# ಹಿಂದೂದೇಶದ ವಿದ್ಯಾಭ್ಯಾಸ

(ಪ್ರಾಚೀನ ಮತ್ತು ಅರ್ವಾಚಿನ)

ಲೇಖಕ:-

**KAVERIKANA V. KRISHNA BHUTT.**

ಕರ್ನಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ 1463 ವರ್ಗ ಸಂಖ್ಯೆ ೮.153.
ತಾರೀಖು........
ಬೆ........

1922

*(All rights reserved)*

Digitized by ROJA MUTHIAH RESEARCH LIBRARY

PRINTED AT THE
SADANANDA CO-OPERATIVE PRINTING WORKS, Ltd.,
**MANGALORE.**

T. 44 N22

# ಶುದ್ಧಾಶುದ್ಧ ಪತ್ರಿಕೆ.

| ಪುಟ. | ಪಂಕ್ತಿ. | ಶುದ್ಧ. | ಅಶುದ್ಧ. |
|---|---|---|---|
| 6. | 22 ಮತ್ತು 23 | धिष्वा | धीष्टा |
| ” | 23 | पठित्वा | पठीत्वा |
| 7. | 13 | ಗುರುವಿನ | ಗುರುಗಳ |
| 11. | 30 | न प्रमदितव्यं ॥ | प्रमादितव्यं ।॥ |
| 13. | 24 | ॥ (शीक्षा) | शिक्षा । |
| 17. | 2 | seem | seemd |
| 23. | 20 | ವಿದ್ಯಾವಂತೆಯರಾದ | ವಿದ್ಯಾವಂತಿಯರಾದ |
| ” | 26 | [ನೆ ಶಹ ಆಲಮನ | ಶಹ ಆಲ್ಮನ [ನೆ |

[ಉಳಿದ ದೋಷಗಳನ್ನು ವಾಚಕರೇ ಸರಿಪಡಿಸಿಕೊಳ್ಳಬೇಕಾಗಿ ವಿನಂತಿ]

ಈ ಪುಸ್ತಕದ ಬೆಲೆ ನಾಲ್ಕಾಣೆ ಮಾತ್ರ.

ಪ್ರತಿಗಳನ್ನಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು:—

ಮೇನೇಜರ್,
ನಾರಾಯಣಮಂಗಲಂ ಸಂಸ್ಕೃತ ಪಾಠಶಾಲಾ.
ಕುಂಬಳೆ ಪೋಸ್ಟು.
ದಕ್ಷಿಣ ಕನ್ನಡ ಜಿಲ್ಲಾ.

Digitized by ROJA MUTHIAH RESEARCH LIBRARY

T. 44
N22

# ಮುನ್ನುಡಿ.

ವಾಚಕ ಮಹಾಶಯ!

ಹಿಂದೂದೇಶದ ವಿದ್ಯಾಭ್ಯಾಸವು ಬಹು ಪ್ರಾಚೀನಕಾಲದಿಂದಲೂ, ಇಂದಿನ ವರೆಗೆ ಯಾವ ರೀತಿಯಿಂದ ಸಾಗಿ ಬಂದಿದೆ ಎಂಬುದನ್ನು ವಿವರವಾಗಿ ತಿಳಿಸುವ ಚರಿತ್ರಾತ್ಮಕವಾದ ಪುಸ್ತಕಗಳು ಕನ್ನಡ ಭಾಷೆಯಲ್ಲಿ ವಿರಳವೆಂದರೆ ತಪ್ಪಾಗದಷ್ಟೆ. ಇದರಿಂದ ನಮ್ಮ ಕನ್ನಡಿಗರಲ್ಲಿ ಹಿಂದೂದೇಶದ ಮಾದರಿಯ ವಿದ್ಯಾಭಿವೃದ್ಧಿಯನ್ನು ಕುರಿತು ಹೆಚ್ಚಿನ ತಿಳುವಳಿಕೆ ಇರುವುದಿಲ್ಲ. ಈ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸಬೇಕೆಂಬ ಉದ್ದೇಶದಿಂದ ಈ ಪುಸ್ತಕವನ್ನು ಬರೆದಿರುವೆನು.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳಿವೆ. ಮೊದಲನೆಯ ಪ್ರಕರಣದಲ್ಲಿ ಅತ್ಯಂತ ಪ್ರಾಚೀನ ಕಾಲದ ಹಿಂದೂ ಆರ್ಯರ ವಿದ್ಯಾಭ್ಯಾಸ ಕ್ರಮವೂ, ಎರಡನೆಯದರಲ್ಲಿ ಅನಂತರದ ಬೌದ್ಧಧರ್ಮ ಕಾಲದ ವಿದ್ಯಾಭ್ಯಾಸ ಕ್ರಮವೂ, ಮೂರನೆಯದರಲ್ಲಿ ಮುಸಲ್ಮಾನರ ಕಾಲದ ಹಿಂದೂದೇಶದ ವಿದ್ಯಾಭ್ಯಾಸ ಕ್ರಮವೂ, ಮತ್ತು ಕೊನೆಯ ಪ್ರಕರಣದಲ್ಲಿ ಈಗಿನ ಇಂಗ್ಲಿಷು ವಿದ್ಯಾಭ್ಯಾಸ ಕ್ರಮವೂ ತಕ್ಕ ಮಟ್ಟಿಗೆ ವಿವರಿಸಲ್ಪಟ್ಟಿವೆ. ಇವುಗಳಿಂದ ಕನ್ನಡಿಗರಿಗೇನಾದರೂ ಪ್ರಯೋಜನವು ದೊರೆತರೆ, ನಾನು ಕೃತಾರ್ಥನಾಗುವೆನು.

ಮನುಷ್ಯನ ಕೃತಿಯು ಸದೋಷವಾದುದು; ಆದುದರಿಂದ ಇದರಲ್ಲಿಯೂ ಅಲ್ಲಲ್ಲಿ ಅನೇಕ ದೋಷಗಳಿರಬಹುದು. ಆದರೆ ಅವುಗಳನ್ನು ವಿದ್ಯಾವಂತರು ತಿದ್ದಿ ಸರಿಪಡಿಸಿದರೆ ಅವರಿಗೆ ನಾನು ಕೃತಜ್ಞನಾಗುವೆನು. ಹೆಚ್ಚೇನು? ಕನ್ನಡಿಗರೆಲ್ಲರೂ ಈ ಪುಸ್ತಕಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೊಡಬೇಕಾಗಿ ವಿನಂತಿ ಮಾಡಿ, ನನ್ನೀ ಲೇಖನಿಯನ್ನು ಕೆಳಗಿಡುವೆನು.

ಇತಿ

N. M. Sanskrit School,
27—5—1922

ಸಜ್ಜನರ ವಿಧೇಯ
***Kaverikan V. Krishna Bhutt.***

Digitized by ROJA MUTHIAH RESEARCH LIBRARY

॥ ಶ್ರೀ ॥

# ವಿದ್ಯೆ

[ವಾರ್ಧಿಕ ಷಟ್ಪದಿ.]

ವಿದ್ಯೆಯಿಂದಲೆ ವಿನಯ ಮೊಳೆದೋರುವುದು; ವಿನಯ ।
ವಿದ್ದಲ್ಲಿ ಯೋಗ್ಯತೆಯು ಬರುವುದಾ ಯೋಗ್ಯತೆಯು ।
ಇದ್ದಲ್ಲಿಯೇ ಧನಾರ್ಜನೆ; ಧನಾರ್ಜನೆಯಿಂದ ಅಹುದು ಧರ್ಮಾ
ವೇದ್ಯವಿಂತೀರೀತಿಯಲಿ ಧರ್ಮಪ್ರೀತಿಯಿಂ । [ಚರಣೆಯೂ॥
ದೀಧರೆಯೊಳಗೆ ನರನು ಸುಖಶಾಂತಿ ಪಡೆಯುವಡೆ ।
ಸಾಧ್ಯವಿಹುದದರಿಂದ ವಿದ್ಯೆಯೇ ಲೋಕದಲಿ ಸನ್ಮಾರ್ಗ ಸಂಪದವದೂ
[॥ ೧ ॥

ಆವ ವಿದ್ಯೆಯು ಕಳ್ಳರಿಗೆ ಕಳುವೊಡಾಗದೋ ।
ಆವ ವಿದ್ಯೆಯು ಸುಬುದ್ಧಿಯನಿತ್ತು ಬೇಗದಿಂ ।
ದಾವ ವಿದ್ಯೆಯು ವೃದ್ಧಿಯಾಗುವುದೊ ದಿನದಿನದೊಳನ್ಯರಿಂಗಿತ್ತ ಬಳಿಕ॥
ಆವ ವಿದ್ಯೆಯು ನಾಶರಹಿತವಾಗಿರುವುದೋ ।
ಆವ ವಿದ್ಯೆಯು ಧನಾರ್ಜನೆಗೆಯಾಧಾರವೋ ।
ಆ ವಿದ್ಯೆ ಸರ್ವಾರ್ಥಸಾಧನವು; ವಿದ್ಯೆಯೇ ಸನ್ಮಾರ್ಗಸಂಪದವದೂ
[॥ ೨ ॥

***K. V. K. Bhutt***

ಶ್ರೀ

# ಹಿಂದೂದೇಶದ ವಿದ್ಯಾಭ್ಯಾಸ

## ಉಪೋದ್ಘಾತ.

ವಿದ್ಯಾಭ್ಯಾಸವೇ ಮಾನವನ ಏಳಿಗೆಯ ಮುಖ್ಯಾಂಗವಾಗಿದೆ ಎಂಬುದು ಸಕಲರಿಗೂ ತಿಳಿದ ವಿಷಯ. ಒಂದು ಜನಾಂಗವು ಅಭಿವೃದ್ಧಿಗೆ ಬರಬೇಕಾದರೆ ಪ್ರಾಯಶಃ ಆ ಜನಾಂಗದವರೆಲ್ಲರೂ ವಿದ್ಯಾವಂತರಾಗಿರಬೇಕು. ಪ್ರಾಚೀನ ಕಾಲದಲ್ಲಿ ಹಿಂದೂ ಆರ್ಯಜನಾಂಗವು ಕೇವಲ ಉಚ್ಚಸ್ಥಿತಿಯಲ್ಲಿತ್ತೆಂಬುದನ್ನು ಪಾಶ್ಚಿಮಾತ್ಯರೂ ಕೂಡ ಒಪ್ಪಿರುವರು. ಇದರಿಂದ ಪ್ರಾಚೀನ ಹಿಂದುಸ್ಥಾನದಲ್ಲಿ ವಿದ್ಯಾಭ್ಯಾಸವು ಕೇವಲ ಉಚ್ಚತರದ್ದಿತ್ತೆಂದು ಬೇರೆ ಹೇಳುವ ಕಾರಣವಿಲ್ಲ.

ಪ್ರಾಚೀನ ಹಿಂದೂ ಆರ್ಯರು ವಿದ್ಯೆಯನ್ನು ಎಷ್ಟು ಮಟ್ಟಿಗೆ ಗೌರವಿಸುತಿದ್ದರೆಂಬುದನ್ನು ನೋಡಿದರೆ ನಮಗೆ ಆಶ್ಚರ್ಯವಾಗದಿರದು. ಈಗ ನಾವು ಅವರ ವಿದ್ಯಾಭ್ಯಾಸ ಕ್ರಮವನ್ನು ನೋಡಿ ಅತ್ಯಾನಂದಭರಿತರಾಗುತ್ತೇವೆ. ಅವರ ಉದ್ಯಮವನ್ನು ನೋಡಿ ನೋಡಿ ಮನದಲ್ಲಿ ಹಿಗ್ಗುತ್ತೇವೆ. ಆದರೆ ಪ್ರಾಯಶಃ ಅವರ ವಿದ್ಯಾಭ್ಯಾಸದ ಮೂಲತತ್ವಗಳನ್ನು ತಿಳಿದುಕೊಂಡು, ಅವುಗಳಂತೆ ನಾವು ವರ್ತಿಸುವುದಿಲ್ಲ. ಇದೀಗ ಕೇವಲ ವಿಷಾದಕರವಾದ ಸಂಗತಿ. ನವನಾಗರಿಕತೆಯ ಮಬ್ಬಿನಿಂದ ನಾವು ಮೈಮರೆತಿರುವೆವು. ಬಹು ಪ್ರಾಚೀನ ಕಾಲದ ನಾಗರಿಕತೆ ವಿದ್ಯಾಭ್ಯಾಸಗಳನ್ನು ತಿಳಿದುಕೊಳ್ಳುವಷ್ಟು ಬುದ್ಧಿವಂತಿಕೆಯು ನಮ್ಮಲಿಲ್ಲ. ಆದರೂ, ಅವರ ವಿದ್ಯಾಭ್ಯಾಸ ಕ್ರಮವನ್ನು ನಾವು ಕಲಿತುಕೊಳ್ಳುವುದರಿಂದ ನಮಗೆ ಹೆಚ್ಚಿನ ಪ್ರಯೋಜನವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಹಿಂದೂದೇಶದ ವಿದ್ಯಾಭ್ಯಾಸವನ್ನು ಕುರಿತು ನಾನು ಈ ಮುಂದಿನ ಪುಟಗಳಲ್ಲಿ ವಿವರಿಸುವೆನು. ಇದನ್ನೋದುವುದರಿಂದ, ನಮ್ಮ ಈಗಿನ ವಿದ್ಯಾಭ್ಯಾಸ ಪದ್ಧತಿಯು ಎಷ್ಟೋ ಶೋಚನೀಯವಾಗಿದೆ ಎಂಬುದನ್ನು ನಾವು ಅರಿತುಕೊಳ್ಳಬಹುದು.

Digitized by ROJA MUTHIAH RESEARCH LIBRARY

## ಮೊದಲನೆಯ ಪ್ರಕರಣ.

### ಅತ್ಯಂತ ಪ್ರಾಚೀನ ಕಾಲದ ಹಿಂದೂ ಆರ್ಯರ ವಿದ್ಯಾಭ್ಯಾಸ ಕ್ರಮ.

ಪ್ರಾಚೀನ ಕಾಲದಲ್ಲಿ ಈಗಿನಂತೆ ಕೊಲೇಜುಗಳೂ, ಹೈಸ್ಕೂಲು ಸೆಕೆಂಡರಿ ಸ್ಕೂಲುಗಳೂ ಇರಲಿಲ್ಲ. ಈಗಿನಂತೆ ಉಪಾಧ್ಯಾಯರುಗಳು ಒಂದೇ ಸಮೂಹದಲ್ಲಿರಲಿಲ್ಲ. ಆಗಿನ ಪಾಠಶಾಲೆಗೆ ಗುರುಕುಲವೆಂಬ ಹೆಸರಿದ್ದಿತು. ಗುರುಕುಲಕ್ಕೆ ಯಜಮಾನನಾದೊಬ್ಬ ಗುರುವು ಶಿಷ್ಯರಿಗೆ ವಿದ್ಯಾಭ್ಯಾಸಮಾಡಿಸುತ್ತಿದ್ದನು. ಇವನಿಗೆ ಕುಲಪತಿ ಎಂಬ ಬಿರುದೂ ಇದ್ದಿತು.

ಗುರುಕುಲವು ನಗರಗಳಲ್ಲಿರಲಿಲ್ಲ. ಕೇವಲ ಹಳ್ಳಿಗಳಲ್ಲಿಯಾಗಲೀ ಅರಣ್ಯ ಮಧ್ಯದಲ್ಲಿಯಾಗಲೀ ಇದ್ದಿತು. ಅದೇ ಗುರುವಿನ ಆಶ್ರಮವಾಗಿದ್ದಿತು. ಶಿಷ್ಯರು ಕೂಡಾ 'ಗುರುಕುಲ ವಾಸ'ದಲ್ಲಿಯೇ ವಾಸಿಸುತ್ತಿದ್ದರು. ಶಿಷ್ಯರೆಲ್ಲರೂ ಕೇವಲ ಬಾಲಕರಾಗಿದ್ದು ಬ್ರಹ್ಮಚಾರಿಗಳಾಗಿದ್ದರು. ಅವರು ಕಠೋರವಾದ ಬ್ರಹ್ಮಚರ್ಯ ವ್ರತವನ್ನು ಕೈಕೊಳ್ಳಬೇಕಾಗಿದ್ದಿತು.

ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳಲ್ಲಿ ಮೊದಲಿನ ಮೂರು ವರ್ಣದವರ ಬಾಲಕರಿಗೆ ಉಪನಯನ ಸಂಸ್ಕಾರವಾಗುವುದು ಇತ್ತಷ್ಟೆ. ಉಪನಯನವು ಬ್ರಾಹ್ಮಣ ಬಾಲಕರಿಗೆ ಎಂಟು ವರ್ಷ ಪ್ರಾಯವಾದಾಗ ಆಗಬೇಕಿದ್ದಿತು; ಕ್ಷತ್ರಿಯ ತರುಣರಿಗೆ ಹನ್ನೊಂದನೇ ವರ್ಷದಲ್ಲಿಯೂ, ವೈಶ್ಯರಿಗೆ ಹನ್ನೆರಡನೇ ವರ್ಷದಲ್ಲಿಯೂ ಉಪನಯನವಾಗಬೇಕಿದ್ದಿತು. ಯಾಕೆಂದರೆ, ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ:—

**गर्भाष्टमेऽब्दे कुर्वीत ब्राह्मणस्योपनायनम् ।**
**गर्भादेकादशोराज्ञो गर्भात्तु द्वादशे विशः ॥**

ಉಪನಯನ ಸಂಸ್ಕಾರವಾದಾಗ ಬ್ರಹ್ಮಚಾರಿಗೆ ಗುರುವು:—

**ऋग्वेदमधीष्टा । यजुर्वेदमधीष्टा ।**
**सामवेदमधीष्टा । इतिहास पुराणादीन् पठीत्वा ॥**

'ಎಂದು ಉಪದೇಶ ಕೊಡುವುದಿದ್ದಿತು. ಇದರಿಂದ ಉಪನಯನವಾದ ಬಾಲಕನು ವೇದಾಧ್ಯಯನವನ್ನು ತೊಡಗಬೇಕಿತ್ತೆಂಬುದು ಸ್ಪಷ್ಟವಾಗುವುದು; ಮಾತ್ರವಲ್ಲದೆ ಇತಿಹಾಸ ಪುರಾಣಗಳನ್ನೂ ಕೂಡ ಪಠಿಸಬೇಕೆಂಬುದಿತ್ತು. ವಾಚಕರೆ, ಇತಿಹಾಸಕ್ಕೆ ಪ್ರಾಚೀನ ಕಾಲದಲ್ಲಿ ಎಷ್ಟು ಮಹತ್ವವನ್ನು ಕೊಟ್ಟಿದ್ದರೆಂಬುದನ್ನು ಊಹಿಸುವುದಕ್ಕೆ ನಮಗೆ ಬರುವಂತಿಲ್ಲ. ನಾವು ನಮ್ಮ ಸಂಧ್ಯಾವಂದನೆಯಲ್ಲಿ



**इतिहास पुराणेभ्यो नमः ।**

ಎಂದು ಹೇಳುತ್ತೇವೆಯಷ್ಟೆ. ಇದರ ಮೂಲ ತತ್ವವಾದರೂ ಅದೇ ಇರುವುದು! ಇತಿಹಾಸವೆಂದರೆ ಪಾಶ್ಚಾತ್ಯರು ಕಂಡುಹಿಡಿದ ಒಂದು ನವೀನ ವಿದ್ಯೆ ಎಂಬುದಾಗಿ ನಮ್ಮಲ್ಲಿ ಅನೇಕರ ಅಭಿಪ್ರಾಯ; ಆದರೆ ಈ ಅಭಿಪ್ರಾಯವು ಸರಿಯಾದುದಲ್ಲ. ಪ್ರಾಚೀನ ಕಾಲದಲ್ಲಿ ಇತಿಹಾಸಕ್ಕಿದ್ದ ಗೌರವದ ತಿಲಾಂಶವಾದರೂ ಈಗ ನಮ್ಮಲ್ಲಿಲ್ಲವೆಂದ ಮೇಲೆ ಇನ್ನೇನು ಹೇಳಬೇಕಾಗಿದೆ? ಅದಂತಿರಲಿ.

ಉಪನಯನ ಸಂಸ್ಕಾರವು ತೀರಿದ ಬಳಿಕ ಬ್ರಹ್ಮಚಾರಿಯು ಗುರುಗಳ ಆಶ್ರಮಕ್ಕೆ ಹೋಗಬೇಕಾಗಿದ್ದಿತು. ಈ ಸಂದರ್ಭದಲ್ಲಿ ಕುಲಪುರೋಹಿತನೇ ಗುರುವಾಗಿ ಸಂಭವಿಸುತ್ತಿದ್ದನು. ಗುರುವಿನ ಆಶ್ರಮವು ಈಗಿನ ಸಣ್ಣ ಸಣ್ಣ ಪಾಠಶಾಲೆಯಂತಿದ್ದಿಲ್ಲ; ಎಷ್ಟು ಮಂದಿ ಶಿಷ್ಯರು ಬಂದರೂ ಸ್ಥಳ ಸಿಗುವಷ್ಟು ದೊಡ್ಡದಾಗಿದ್ದಿತ್ತು. ಒಬ್ಬ ಗುರುವಿನ ಕೈಕೆಳಗೆ ೧೦,೦೦೦ ಶಿಷ್ಯರಿದ್ದರೆಂದ ಮೇಲೆ ಒಂದು ಗುರುಕುಲವು ಎಷ್ಟು ದೊಡ್ಡದಿತ್ತೆಂಬುದನ್ನು ನೀವೇ ಯೋಚಿಸಿರಿ!!

ಗುರುಕುಲವು ಗುರುಗಳ ಸ್ವಂತದ್ದೇ ಆಗಿದ್ದಿತ್ತು. ಅದರ ಇಡೀ ಆಡಳಿತೆಯು ಕೇವಲ ಗುರುವಿನ ಸ್ವಂತ ವೆಚ್ಚದಿಂದಲೇ ಸಾಗುತ್ತಿದ್ದಿತು. ಇಷ್ಟು ವಿಪರೀತ ಖರ್ಚುಮಾಡಿ, ಅವನು ತನ್ನ ಶಿಷ್ಯರಿಗೆ ವಿದ್ಯಾಭ್ಯಾಸವನ್ನು ಹೇಳಿಕೊಡಬೇಕಾಗಿದ್ದಿತು. ಅದಕ್ಕೆ ಪ್ರತಿಯಾಗಿ ವಿದ್ಯಾರ್ಥಿಗಳು ಏನೂ ಕೊಡಬೇಕಾಗಿದ್ದಿಲ್ಲ. ಶಿಷ್ಯರೂ ಗುರುವಿನ ಸಂಗಡಲೇ ಜೀವಿಸುತ್ತಿದ್ದು, ಅವನಲ್ಲೆ ಸ್ನಾನ ಭೋಜನಾದಿಗಳನ್ನು ಮಾಡುತ್ತಿದ್ದರು.

ಗುರುವಾದರೋ ಸಾಧಾರಣ ಮನುಷ್ಯನಿದ್ದಿಲ್ಲ; ಅವನು ಸಕಲ ವೇದ ಶಾಸ್ತ್ರ ಪಾರಂಗತನಾಗಿದ್ದನು. ಯಾವ ವಿದ್ಯೆಯಲ್ಲೂ ಅವನಿಗೆ ಕೊರತೆಯಿರಲಿಲ್ಲ. ಗುರುವು ಪ್ರಾಯಶಃ ಋಷಿಯಾಗಿದ್ದನು, ಇಲ್ಲವೆ ಯೋಗಿಯಾಗಿದ್ದನು. ಹಾಗೂ ಅವನು ಲೌಕಿಕ ಇಚ್ಛೆಯಿಂದ ಬಿಡುಗಡೆ ಹೊಂದಿದವನಾಗಿದ್ದನು. ಅವನು ಕೊಡುವ ವಿದ್ಯಾಭ್ಯಾಸದಲ್ಲಿ ಅವನಿಗೆ ಅದ್ಭುತ ಪಾಂಡಿತ್ಯವಿದ್ದಿತು. ಆಗಿನ ಕಾಲದಲ್ಲಿ ಒಬ್ಬ ಋಷಿಯು ಎಷ್ಟು ವಿದ್ಯೆಗಳನ್ನರಿತವನಾಗಿದ್ದನು ಎಂಬುದನ್ನು ಈ ಕೆಳಗಿನ ವಾಕ್ಯದಿಂದ ತಿಳಿಯಬಹುದು:—

"What have you learnt" asks Sanat Kumara whom Narada requests to teach him Brahma, and Narad answers "I have studied 1. Rig-veda, 2. Yajur-veda, 3. Sama-veda, 4. Atharva-veda, 5. Ithihasa-purana, 6. Grammar, 7. Pitrya (ritual), 8. Rashi (arithmetic or

Digitized by ROJA MUTHIAH RESEARCH LIBRARY

the science of number) 9. Daivanidhi, 10. Brahma-vidya, 11. Bhuta-vidya, 12. Kshatra-vidya, 13. Sarpa devajana-vidya" [Epic, India Pp. 342.]

ಹೆಚ್ಚು ಕಡಿಮೆ ಮೇಲೆ ಹೇಳಿದ ವಿದ್ಯೆಗಳೆಲ್ಲವೂ ಸಾಮಾನ್ಯವಾಗಿ ಒಬ್ಬ ಗುರುವಿಗೆ ಗೊತ್ತಿದ್ದಿತು. ಕೆಲವು ಕಾಲಗಳ ಅನಂತರ ಸ್ಮೃತಿಗಳೂ ಉಂಟಾಗಿ, ಅವುಗಳೂ ಒಂದು ವಿದ್ಯಾಂಗವಾಗಿ ಏರ್ಪಟ್ಟವು. ಆದುದರಿಂದ ಗುರುಕುಲಕ್ಕೆ ಒಡೆಯನಾಗುವಂಥ ಗುರುವು ಸಕಲ ಶಾಸ್ತ್ರಗಳಲ್ಲಿಯೂ ಪಾಂಡಿತ್ಯವನ್ನು ಹೊಂದಿದವನಾಗಿದ್ದನು.

ಆದರೆ ಬಹಳ ಮಂದಿ ಶಿಷ್ಯರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದು ಒಬ್ಬನೇ ಗುರುವಿಗೆ ಸಾಧ್ಯವೆ ಎಂಬ ಪ್ರಶ್ನೆಯು ಸಾಧಾರಣವಾಗಿ ಪ್ರತಿಯೊಬ್ಬನಲ್ಲಿಯೂ ಹುಟ್ಟುವುದು. ಇಡೀ ಗುರುಕುಲಕ್ಕೆ ಒಬ್ಬನೇ ಗುರುವು ಅಧಿಪತಿಯಾಗಿದ್ದರೂ, ಅವನ ಕೈಕೆಳಗೆ ಅನೇಕ ಮಂದಿ ಮಧ್ಯಮ ಶಿಷ್ಯರು (Pupil teachers) ಇದ್ದರು. ಅವರು ನವೀನವಾಗಿ ಬಂದಿರುವ ಶಿಷ್ಯರಿಗೆ ಪಾಠ ಹೇಳುವುದರಲ್ಲಿ ಗುರುವಿಗೆ ಸಹಾಯಮಾಡುತಿದ್ದರು. ಅವರು ತಮ್ಮ ವಿದ್ಯಾಭ್ಯಾಸವನ್ನು ಗುರುವಿನ ಸಮಕ್ಷಮದಲ್ಲಿ ಮಾಡುತಿದ್ದರು. ಗುರುವು ಎಲ್ಲಾ ಶಿಷ್ಯರನ್ನೂ ಸಂದರ್ಶಿಸಿ, ಆಯಾಯ ದಿನದ ಪಾಠಗಳ ಸಮತೆಯನ್ನು ನೋಡಿಕೊಳ್ಳುತಿದ್ದನು. "ಶಿಷ್ಯರ ಸಮಸ್ತ ವಿಷಯಗಳೂ ಗುರುವಿನ ಆಜ್ಞಾನುಸಾರವಾಗಿಯೇ ನಡೆಯುತಿದ್ದುವು. ಅವರು ಪ್ರಾಯ ಮತ್ತು ವಿದ್ಯೆ ಮೊದಲಾದುವುಗಳಲ್ಲಿ ಕಡಮೆಯವರಾದುದರಿಂದ, ಅವರಿಗೆ ಕರ್ತವ್ಯವನ್ನು ಸದಸದ್ವಿವೇಚನೆಯಿಂದ ಮಾಡುವುದಕ್ಕೆ ತಿಳಿಯುವುದಿಲ್ಲ. ಆದುದರಿಂದಲೆ ಇಚ್ಛೆಗೆ ಬಿಟ್ಟರೆ ಎಂದೆಂದೂ ಅವರ ನಡೆನುಡಿಗಳು ನಯವಾಗಲಿಕ್ಕಿಲ್ಲವೆಂದರಿತು ಮುಂಜಾಗ್ರತೆಯುಳ್ಳ ಗುರುವು ಅವರಿಗೆ 'ಹಾಕಿದ ಅನ್ನ, ಹೇಳಿದ ಕೆಲಸ'ವೆಂದು ನೇಮಿಸಿದ್ದನು.

ಶಿಷ್ಯರು ತಮ್ಮ ಕೈಯಿಂದ ಯಾವ ಖರ್ಚನ್ನು ಮಾಡುತ್ತಿರಲಿಲ್ಲ. ಅವರಿಗೆ ಸ್ನಾನ ಭೋಜನಾದಿಗಳ ಏರ್ಪಾಡುಗಳೆಲ್ಲವನ್ನೂ ಗುರುವೇ ನೋಡಿಕೊಳ್ಳುತಿದ್ದನು. ಆದುದರಿಂದ ಆ ವಿಷಯವಾಗಿ ಶಿಷ್ಯರು ನಿಶ್ಚಿಂತೆಯಾಗಿ ಇರಬಹುದಾಗಿದ್ದಿತ್ತು. ಆದರೆ ಗುರುವು ಹೇಳಿದ ಕೆಲಸವನ್ನು ಅವರು ಭಕ್ತಿಯಿಂದ ಮಾಡುತಿದ್ದರು; ಇದರಿಂದ ಅವರಲ್ಲಿ ವಿನಯವು ಮೊಳೆದೋರುತಿದ್ದಿತು. ಆದ್ದರಿಂದಲೇ

**विद्या ददाति विनयं विनयाद्याति पात्रतां ।**
**पात्रत्वाद्धनमाप्नोति धनाद्धर्मंततस्सुखं ।**

ಎಂಬುದಾಗಿ ಪೂರ್ವಜರು ಹೇಳಿದ್ದಾರೆ. ಯಾವ ವಿದ್ಯೆಯಿಂದ ವಿನಯವೂ,



ಪಾತ್ರತೆಯೂ, ಧನವೂ, ಧರ್ಮವೂ, ಸುಖವೂ ಲಭಿಸುವುವೋ ಅದನ್ನೇ ಗುರುವು ವಿದ್ಯೆ ಎಂದು ತಿಳಿದಿದ್ದನು.

ಶಿಷ್ಯರಿಗೆ ಪಾಠಗಳನ್ನು ಹೇಳಿದ ಮಾತ್ರಕ್ಕೆ, ಗುರುವಿಗೂ ಶಿಷ್ಯರಿಗೂ ಇರುವ ಸಂಬಂಧವು ತೀರಲಿಲ್ಲ. ಶಿಷ್ಯರು ಆಜನ್ಮಮರಣ ಪರ್ಯಂತರವೂ ಗುರುವಿಗೆ ವಿಧೇಯರಾಗಿದ್ದರು. ಗುರುಭಕ್ತಿಯು ಎಷ್ಟೆಷ್ಟು ಹೆಚ್ಚಾಗಿ ಶಿಷ್ಯರಲ್ಲಿ ನೆಲಸಿದ್ದಿತೋ, ಅಷ್ಟಷ್ಟು ಹೆಚ್ಚಾಗಿ ಅವರು ಗುರುವಿನ ಆದರಕ್ಕೂ ಪ್ರೀತಿಗೂ ಪಾತ್ರರಾಗುತಿದ್ದರು; ಅಷ್ಟಷ್ಟು ಹೆಚ್ಚಾಗಿ ಅವರು ವಿದ್ಯಾಭ್ಯಾಸದಲ್ಲಿ ಅಭಿವೃದ್ಧಿ ಹೊಂದುತಿದ್ದರು.

ಒಬ್ಬ ಗುರುವಿಗೆ, ಕೇವಲ ಸಾಮಾಜಿಕ ಜನರು ಮಾತ್ರವೇ ಶಿಷ್ಯರಾಗಬೇಕೆಂಬ ನಿಯಮವಿದ್ದಿಲ್ಲ. ಅವನಿಗೆ ಕೆಲವು ವೇಳೆ ರಾಜಾಧಿರಾಜರೂ ಕೂಡಾ ಶಿಷ್ಯರಾಗುತಿದ್ದರು. ಮಹಾಭಾರತದಲ್ಲಿ ದ್ರೋಣಾಚಾರ್ಯರಿಗೆ ಅನೇಕ ಮಂದಿ ರಾಜರು ದಾಸಾನುದಾಸರಾಗಿದ್ದರು.

ಗುರುವಿನ ಆಜ್ಞೆಯನ್ನು ಎಂಥವನಾದರೂ ಪಾಲಿಸುತಿದ್ದನು; ಅವನು ರಾಜನೇ ಆಗಲಿ, ಕೇವಲ ದರಿದ್ರನೇ ಆಗಲಿ, ಗುರುವಿನ ಆಜ್ಞೆಯಂತೆ ಅಕ್ಷರಶಃ ಪ್ರತಿಯೊಬ್ಬನೂ ನಡೆದುಕೊಳ್ಳುತಿದ್ದನು. ಶಿಷ್ಯರು ಅವಿಧೇಯತೆಯಿಂದ ನಡೆದುಕೊಂಡರೆ, ಅವರಿಗೆ ಕಠಿಣತರವಾದ ಶಿಕ್ಷೆಯು ವಿಧಿಸಲ್ಪಡುತಿದ್ದಿತು. ಆಗಿನ ಕಾಲದಲ್ಲಿ ಗುರುಭಕ್ತಿ ಎಷ್ಟರ ಮಟ್ಟಿಗಿತ್ತೆಂಬುದನ್ನು ಉತ್ತಂಕನ ಕಥೆಯಿಂದ ತಿಳಿದುಕೊಳ್ಳಬಹುದು. ಎಂಥಾ ಕಷ್ಟಸಂಭವಿಸುವುದಿದ್ದರೂ ಶಿಷ್ಯರು ಗುರುವಿನಾಜ್ಞೆಯನ್ನು ತಪ್ಪದೆ ನಡಿಸಿಕೊಡುತಿದ್ದರು.

ಇನ್ನು ವಿದ್ಯಾಭ್ಯಾಸ ಕ್ರಮವನ್ನು ಕುರಿತು ವಿಚಾರ ಮಾಡುವ:– ಮೊತ್ತ ಮೊದಲು ಶಿಷ್ಯರು ತಮ್ಮ ಸಂಧ್ಯಾವಂದನೆಯನ್ನು ಕಲಿಯುತಿದ್ದರು. ಆ ಕಾಲದಲ್ಲಿ ಎಂದರೆ ಬಹಳ ಪುರಾತನ ಕಾಲದಲ್ಲಿ, ಈಗಿನಂತೆ ಬರಹವು ಪ್ರಚಾರದಲ್ಲಿದ್ದಿಲ್ಲ. ಎಲ್ಲಾ ವಿದ್ಯಾಂಗಗಳನ್ನೂ ಕೇವಲ ಗುರುಮುಖದಿಂದಲೇ ಬಾಯಿಪಾಠ ಕಲಿಯಬೇಕಾಗಿದ್ದಿತು. ಆದರೆ 'ವಿದ್ಯೆಯನ್ನು ಗಿಳಿಯಂತೆ ಅರ್ಥಜ್ಞಾನವಿಲ್ಲದೆ ಕಲಿಯುವುದು ನಿರರ್ಥಕ'ವೆಂದು ಮಹಾಭಾರತದ ಶಾಂತಿಪರ್ವದಲ್ಲಿ ಹೇಳಿದೆ. ಆದುದರಿಂದ ಪ್ರಾಯಶಃ ಆ ಕಾಲದಲ್ಲಿ ಶಿಷ್ಯರು ಅರ್ಥಜ್ಞಾನವರಿಯದೆ ಶ್ಲೋಕಗಳನ್ನು ಬಾಯಿಪಾಠ ಮಾಡುತಿದ್ದಿಲ್ಲ. ಪ್ರತಿಯೊಂದು ಶ್ಲೋಕದ ಅರ್ಥವ್ಯಾಖ್ಯಾನಗಳನ್ನು ಗುರುವು ಚೆನ್ನಾಗಿ ಶಿಷ್ಯರಿಗೆ ವಿವರಿಸಿ ಹೇಳಿದ ಮೇಲೆ ಅವುಗಳನ್ನು ಶಿಷ್ಯರು ಬಾಯಿಪಾಠ ಮಾಡುವ ಸಾಂಪ್ರದಾಯವಿದ್ದಿತ್ತು. ಹೀಗೆ ಬಾಯಿಪಾಠ ಮಾಡುವುದರಿಂದ ಶಿಷ್ಯರಲ್ಲಿ ಜ್ಞಾಪಕಶಕ್ತಿಯು ಅಧಿಕವಾಗಿ ಅಭಿವೃದ್ಧಿಯಾಗುತಿದ್ದಿತು.

ಪ್ರಾಚೀನ ಕಾಲದ ವಿದ್ಯಾಭ್ಯಾಸವು ಕೇವಲ ಡಾಂಭಿಕವೃತ್ತಿಗಾಗಿಯೇ

Digitized by ROJA MUTHIAH RESEARCH LIBRARY

ಇದ್ದಿಲ್ಲವೆಂಬುದನ್ನು ಪ್ರತಿಯೊಬ್ಬನೂ ಲಕ್ಷ್ಯದಲ್ಲಿಡತಕ್ಕದ್ದು. ಈಗಿನವರಾದರೋ, ಒಂದೆರಡು ವರುಷ ವಿದ್ಯಾಭ್ಯಾಸ ಮಾಡಿದೊಡನೆ, ಅಲ್ಲಸಲ್ಲದ ಡಾಂಭಿಕವೃತ್ತಿಯನ್ನು ಕಲಿತುಕೊಂಡು ಹಿಗ್ಗುತಿರುವುದನ್ನು ನಾವು ಕಣ್ಣಾರೆ ನೋಡುತ್ತಿರುವೆವು. ಆದರೆ ಪೂರ್ವಕಾಲದ ತರುಣರು ತಮ್ಮ ಬ್ರಹ್ಮಚರ್ಯಾಶ್ರಮದಲ್ಲಿ ಶ್ರಮಪಟ್ಟು ಹಲವು ವರುಷಗಳ ತನಕ ವಿದ್ಯಾಭ್ಯಾಸ ಮಾಡಿ, ಸಕಲ ವೇದಶಾಸ್ತ್ರ ಪಾರಂಗತರಾಗಿ ಕೊನೆಗೆ ಗೃಹಸ್ಥಾಶ್ರಮವನ್ನು ವಹಿಸಿ, ಕೇವಲ ಸಾಧುಗಳಾಗಿ ಜೀವಿಸುತ್ತ, ಪರೋಪಕಾರಾದಿ ಸದ್ಗುಣಭೂಷಣರಾಗಿ ಲೋಕವನ್ನು ಬೆಳಗುತಿದ್ದರು. ಅವರ ಜೀವಮಾನ ಸಾರ್ಥಕ್ಯವನ್ನೂ, ಈಗಿನ ಡಾಂಭಿಕತನದಲ್ಲಿರುವ ವಿದ್ಯಾವಂತರ ಜೀವನ ವೇಷವನ್ನೂ ಹೋಲಿಸಿ ನೋಡಿದರೆ ಎಷ್ಟೋ ಅಜಗಜಾಂತರ! ಪ್ರಾಚೀನ ಗೃಹಸ್ಥ ವಿದ್ವಾಂಸರ ಮುಂದೆ, ಈಗಿನ ವಿದ್ಯಾವಂತರು ತಲೆ ತಗ್ಗಿಸಿ ದಂಡಪ್ರಣಾಮ ಮಾಡಲಿ!

ಆಗಿನ ಕಾಲದಲ್ಲಿ ವಿದ್ಯಾಭ್ಯಾಸದಲ್ಲಿ ಅನೇಕ ವಿದ್ಯಾಂಗಗಳಿದ್ದುವು. ಪ್ರತಿಯೊಂದು ವಿದ್ಯಾಂಗವನ್ನೂ ಸವಿಸ್ತಾರವಾಗಿ ಗುರುವು ಬಲ್ಲವನಾಗಿದ್ದನು. ಅವನು ಬ್ರಾಹ್ಮಣರಾದ ಶಿಷ್ಯರಿಗೆ ಅವರಿಗೆ ಯೋಗ್ಯವಾದ ವೇದಶಾಸ್ತ್ರಗಳ ವಿದ್ಯಾಭ್ಯಾಸವನ್ನೂ, ಕ್ಷತ್ರಿಯರಿಗೆ ಕ್ಷಾತ್ರತೇಜಕ್ಕೆ ಯೋಗ್ಯವಾಗುವಂಥ ವಿದ್ಯೆಯನ್ನೂ, ವೈಶ್ಯರಿಗೆ ವಾಣಿಜ್ಯಸಂಬಂಧವಾದ ವಿದ್ಯೆಯನ್ನೂ ಹೇಳಿಕೊಡುತಿದ್ದನು. ವಿದ್ಯೆಯೆಲ್ಲವೂ ಶ್ಲೋಕರೂಪವಾಗಿ ಸಂಸ್ಕೃತಭಾಷೆಯಲ್ಲಿದ್ದಿತು. ಅವುಗಳನ್ನು ಶಿಷ್ಯರು ಬಾಯಿಪಾಠ ಕಲಿತುಕೊಳ್ಳುತಿದ್ದರು.

ವೇದಗಳು ವಿದ್ಯಾಂಗಗಳಲ್ಲಿ ಮುಖ್ಯವಾಗಿದ್ದುವು; ಇವುಗಳನ್ನು ಪ್ರಾಯಶಃ ಪ್ರತಿಯೊಬ್ಬ ಶಿಷ್ಯನೂ ಕಲಿಯಬೇಕಾಗಿದ್ದಿತು. ಮುಖ್ಯವಾಗಿ ಬ್ರಾಹ್ಮಣ ಶಿಷ್ಯರು ಅಗತ್ಯವಾಗಿ ವೇದಗಳನ್ನು ಕಲಿಯುತಿದ್ದರು; ಮತ್ತು ಉಪನಿಷತ್ತುಗಳನ್ನೂ ಕಲಿಯುತಿದ್ದರು. ಹಲವರು ಜ್ಯೋತಿಷ್ಯವನ್ನೂ, ಕೆಲವರು ವೈದ್ಯಶಾಸ್ತ್ರವನ್ನೂ, ಕೆಲವರು ಖಗೋಲಶಾಸ್ತ್ರವನ್ನೂ ಕಲಿಯುತಿದ್ದರು. ಹಾಗೂ ಅವರವರಿಗೆ ಯೋಗ್ಯವಾದ ವಿಷಯಗಳನ್ನೇ ಗುರುವು ಅವರಿಗೆ ಕಲಿಸುತಿದ್ದನು. ಆ ಕಾಲದಲ್ಲಿ ವಿದ್ಯಾಭ್ಯಾಸದಲ್ಲಿ ಆರ್ಯಜನಾಂಗದವರು ಅಭಿವೃದ್ಧಿ ಹೊಂದಿದಷ್ಟು ಇನ್ನಾವ ಜನಾಂಗದವರೂ ಅಭಿವೃದ್ಧಿಗೆ ಬರಲಿಲ್ಲ. ಜ್ಯೋತಿಷ್ಯಶಾಸ್ತ್ರವು ಶಾಸ್ತ್ರ ಸಿದ್ಧಾಂತವಾಗಿರುವುದು; ಅದನ್ನು ನಾವು ಈಗಲೂ ಬಹಳ ಭಕ್ತಿಯಿಂದ ಕಲಿಯುತ್ತೇವೆ. ವೈದ್ಯಶಾಸ್ತ್ರವಾದರೂ ಅಷ್ಟೇ ಮಹತ್ವದ್ದಿರುವುದು. "ತ್ರಿದೋಷಗಳ ವಿವರವೂ, ಶರೀರ ಮನಸ್ಸುಗಳ ಸಂಬಂಧವೂ, ಯಕೃತ್, ಪ್ಲೀಹಾ, ಆಮಾಶಯ, ರಕ್ತಾಶಯಗಳ ವಿವರವೂ, ಕಣ್ಣು ತಲೆಹಲ್ಲುಗಳ ರೋಗಗಳೂ, ಜ್ವರ, ಜಲೋದರ, ಕುಷ್ಟ, ಅಪಸ್ಮಾರ ಮುಂತಾದ ರೋಗಗಳೂ ವೈದ್ಯಶಾಸ್ತ್ರದಲ್ಲಿ ಉಲ್ಲೇಖಿಸಲ್ಪಟ್ಟಿವೆ." ಖಗೋಲದಲ್ಲಿ ಎಲ್ಲಾ ನಕ್ಷತ್ರಗಳ ನಿರ್ಣಯವೂ



ವಿವರಿಸಲ್ಪಟ್ಟಿದೆ. ಇವಲ್ಲದೆ ಇತಿಹಾಸ ಪುರಾಣ ಮೊದಲಾದ ವಿದ್ಯಾಂಗಗಳಲ್ಲಿಯೂ ಕೂಡ ಆ ಕಾಲದಲ್ಲಿ ಉಚ್ಚ ಶಿಕ್ಷಣವು ದೊರೆಯುತಿದ್ದಿತು. ಇದರಿಂದ ಪೂರ್ವ ಕಾಲದ ಆರ್ಯರ ವಿದ್ಯಾಭ್ಯಾಸ ಕ್ರಮದ ಮಹತ್ವವು ಎಷ್ಟಿತ್ತೆಂಬುದನ್ನು ನೀವೇ ನಿರ್ಧರಿಸಿರಿ.

ಪ್ರಾಚೀನ ವಿದ್ಯಾಭ್ಯಾಸದಲ್ಲಿ ನೈತಿಕ ಶಿಕ್ಷಣವೇ ಅತ್ಯಂತ ಮುಖ್ಯವಾಗಿದ್ದಿತು. ಆದರೆ ಆ ನೈತಿಕ ಶಿಕ್ಷಣವು ಕೇವಲ ಸಾಮಾಜಿಕ ಸ್ಥಿತಿಗತಿಗಳನ್ನು ಮಾತ್ರವೇ ಅನುಸರಿಸಿರಲಿಲ್ಲ. ಧಾರ್ಮಿಕ ಸ್ಥಿತಿಗತಿಗಳನ್ನು ಅನುಸರಿಸಿಯೂ ಕೂಡಾ ನೈತಿಕ ಶಿಕ್ಷಣವು ಪ್ರಬಲವಾಗಿದ್ದಿತು. ಒಟ್ಟಾರೆ, ಕೆಟ್ಟದಾದುದೆಲ್ಲವನ್ನೂ ಮೂಲೆಗೊತ್ತಿ, ಒಳ್ಳೇದೆಲ್ಲವನ್ನು ಮಾನವನ ಸುಧಾರಣೆಯ ಮಾರ್ಗಕ್ಕೆ ಗೊತ್ತುಹಚ್ಚುವುದೇ ಆಗಿನ ಕಾಲದ ನೈತಿಕ ಶಿಕ್ಷಣದ ಉದ್ದೇಶವಾಗಿದ್ದಿತು. ಈ ನೈತಿಕ ಶಿಕ್ಷಣವು ಕೇವಲ ಬ್ರಹ್ಮಚರ್ಯಾಶ್ರಮದಲ್ಲಿ ಮಾತ್ರವೇ ಅಲ್ಲ, ಯಾವತ್ತೂ ಗೃಹಸ್ಥಾಶ್ರಮದಲ್ಲಿಯೂ ಕೂಡಾ ಆಚರಣೆಯಲ್ಲಿ ತರಬೇಕಾಗಿದ್ದಿತು.

ಬ್ರಹ್ಮಚರ್ಯ ವ್ರತವನ್ನು ಪಾಲಿಸುವುದು, ಪ್ರಾಚೀನ ಕಾಲದ ವಿದ್ಯಾರ್ಥಿ ದೆಶೆಯ ಪ್ರಥಮ ಕರ್ತವ್ಯವಾಗಿದ್ದಿತು. ಈ ಬ್ರಹ್ಮಚರ್ಯ ಪಾಲನೆಯಲ್ಲೇ ಮನುಷ್ಯರ ಮುಂದಿನ ಗುಣಾವಗುಣಗಳು ಹೊಂದಿಕೊಂಡಿರುವವು ಎಂಬುದಕ್ಕೆ ಸಂದೇಹವಿಲ್ಲ; 'ಬಸಿರಿಂದಾಂಪರೆ ಗುಣಾವಗುಣವಂ?' ಎಂಬ ಸಾಮತಿಯಂತೆ, ಹುಟ್ಟಿದಾಗಲೆ ಯಾರೂ ಗುಣವಂತರಾಗಿರುವುದಿಲ್ಲ. ಮನುಷ್ಯನು ಎಲ್ಲವನ್ನೂ, ತನ್ನ ವಿದ್ಯಾರ್ಥಿ ದೆಸೆಯಲ್ಲಿ ಅಂದರೆ ಬ್ರಹ್ಮಚರ್ಯ ಕಾಲದಲ್ಲಿ ಕಲಿತುಕೊಳ್ಳುವನು. ಆ ದೆಶೆಯಲ್ಲಿ ಅವನು ಯಾವ ವೃತ್ತಿ ಗುಣಗಳನ್ನು ಅನುಸರಿಸುವನೋ, ಅದೇ ಮುಂದೆ ಅವನ ಜೀವನದಲ್ಲಿ ಪ್ರಬಲಗುಣವಾಗಿ ನೆಲೆಗೊಳ್ಳುವುದು. ಈ ತತ್ವವನ್ನು ತಿಳಿದುಕೊಂಡೇ ಗುರುವು ತನ್ನ ಶಿಷ್ಯರಿಗೆ, ಅವರ ಬ್ರಹ್ಮಚರ್ಯ ಕಾಲದಲ್ಲಿ ಎಲ್ಲಕ್ಕೂ ಮೊದಲು ಉಚ್ಚವಾದ ನೈತಿಕ ಶಿಕ್ಷಣವನ್ನು ಕೊಡುತಿದ್ದನು.

ಈ ನೈತಿಕ ಶಿಕ್ಷಣದ ಸೂತ್ರಗಳು ಮುಖ್ಯವಾಗಿ 'ತೈತ್ತಿರೀಯೋಪನಿಷತ್ತಿನ 'ಶೀಕ್ಷಾ'ಧ್ಯಾಯದಲ್ಲಿ ಹೇಳಲ್ಪಟ್ಟಿವೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಈ ಅಧ್ಯಾಯವು ಬಹಳ ಅಮೂಲ್ಯವಾಗಿದೆ. ಉದಾಹರಣೆಗಾಗಿ ಅದರಲ್ಲಿರುವ ಕೆಲವು ಧರ್ಮ ನೀತಿ ಸೂತ್ರಗಳನ್ನಿಲ್ಲಿ ಹೇಳುವುದು ಯೋಗ್ಯವೆನಿಸುವುದು:—

**सत्यं वद । धर्मं चर । स्वाध्यायान्मा प्रमदः ।**
**सत्यान्नप्रमदितव्यं । धर्मान्नप्रमदितव्यं ।**
**कुशलान्न प्रमदितव्यं भूत्यै न प्रमदितव्यं ।**
**स्वाध्याय प्रवचनाभ्यां प्रमदितव्यं ।।'**

Digitized by ROJA MUTHIAH RESEARCH LIBRARY

"ಸತ್ಯವನ್ನೇ ನುಡಿ; ಧರ್ಮವನ್ನೇ ಆಚರಿಸು; ಸ್ವಾಧ್ಯಾಯದಿಂದ ಪ್ರಮಾದವನ್ನು ತಂದುಕೊಳ್ಳಬೇಡಾ । ಸತ್ಯದಿಂದ ಅಸತ್ಯವನ್ನುಂಟುಮಾಡಿಕೊಳ್ಳಬೇಡಾ! ಧರ್ಮದಿಂದ ಅಧರ್ಮವನ್ನು ತಂದುಕೊಳ್ಳಬೇಡ। ಸುಖದಿಂದ ದುಃಖವನ್ನು ಬರಮಾಡಿಕೊಳ್ಳದಿರು । ಐಶ್ವರ್ಯದಿಂದ ಕೇಡು ತಂದುಕೊಳ್ಳಬೇಡಾ । ನೀನು ಕಲಿತದ್ದನ್ನು ಅನ್ಯರಿಗೆ ಹೇಳಿಕೊಡುವಾಗ ತಪ್ಪಾದುದನ್ನು ಹೇಳಬೇಡಾ." ಒಟ್ಟಾರೆ ಯಾವುದು ಧರ್ಮಾವಲಂಬಿತವಾಗಿರುವುದೋ, ಅಂಥಾ ಕಾರ್ಯವನ್ನೇ ಪ್ರತಿಯೊಬ್ಬನೂ ಮಾಡತಕ್ಕುದು. ಇದು ಬ್ರಹ್ಮಚಾರಿಗಳಿಗೆ ಮಾತ್ರವೇ ಹೇಳಿದ ಪಾಠವೆಂದು ತಿಳಿಯಕೂಡದು; ಇದು ಮಾನವನ ಇಡೀ ಜೀವಿತಕಾಲಕ್ಕೇ ಮಾದರಿಯಾಗಿರುವ ಪಾಠ. ಅದೇ ಶೀಕ್ಷಾಧ್ಯಾಯದಲ್ಲಿ,

"देवापितृकार्याभ्यां न प्रमदितव्यं" ।

ಎಂದರೆ, 'ದೈವಭಕ್ತಿಯಲ್ಲಿಯೂ, ಪಿತೃಭಕ್ತಿಯಲ್ಲಿಯೂ, ಯಾವ ತಪ್ಪಿತವನ್ನೂ ಮಾಡದಿರು' ಎಂದು ಹೇಳಿರುವುದು. ಅಷ್ಟೇ ಅಲ್ಲ,

"मातृदेवो भव । पितृदेवो भव ।
आचार्यदेवो भव । अतिथिदेवो भव" ।

ಅಹ! ಇವುಗಳಲ್ಲಿ ಎಷ್ಟೊಂದು ಉಚ್ಚತರದ ಹಿಂದೂ ಧರ್ಮಾಭಿಮಾನವು ತುಂಬಿ ತುಳುಕುತ್ತಿರುವುದು ನೋಡಿ! ಇಂಥಾ ಉಪದೇಶವನ್ನು ಕೇಳಿಕೊಳ್ಳುವ ಸುಯೋಗವು ಪ್ರಾಚೀನ ಹಿಂದೂ ಬಾಲಕರಿಗಲ್ಲದೆ, ಇನ್ನಾರಿಗೆ ತಾನೇ ಲಭಿಸುವುದು? ಅಷ್ಟೇ ತಾನೇ?

"यान्यवद्यानि कर्माणि । तानि सेवितव्यानि । नो इतराणि"

'ಯಾವ ಕಾರ್ಯಗಳನ್ನು ನಾವು ಮಾಡಬೇಕಾಗಿರುವುದೋ, ಅವುಗಳನ್ನು ಅವಶ್ಯವಾಗಿ ನಾವು ಮಾಡಿಯೇ ತೀರಬೇಕು'. ಇವೆಲ್ಲವೂ ಆ ಕಾಲದ ವಿದ್ಯಾರ್ಥಿಗಳಿಗೆ ಕೊಡುತಿದ್ದ ಉಪದೇಶವಾಗಿದ್ದುವು.

ಪ್ರತಿಯೊಬ್ಬ ಶಿಷ್ಯನೂ ಪ್ರಾತಃಕಾಲವಾಗುತ್ತಲೆದ್ದು, ಸ್ನಾನಮಾಡಿ ಸಂಧ್ಯಾವಂದನೆಯನ್ನು ಮಾಡುತಿದ್ದನು; ಆ ಬಳಿಕ ಅಗ್ನಿಹೋತ್ರವನ್ನು ಪೂರೈಸಿಕೊಂಡು, ಗುರು ಆಜ್ಞೆಯಂತೆ ವರ್ತಿಸಲು ಸಿದ್ಧನಾಗಿರುತಿದ್ದನು. ಗುರುವೂ ಹಾಗೆಯೇ ಸ್ನಾನಾದಿ ಜಪತಪಗಳನ್ನು ತೀರಿಸಿಕೊಂಡು, ಶಿಷ್ಯರಿಗೆ ಪಾಠ ಹೇಳುವುದಕ್ಕೆ ಸಿದ್ಧವಾಗಿರುತಿದ್ದನು. ಶಿಷ್ಯರೆಲ್ಲರೂ ಬಂದು, ಗುರುವಿನ ಬಳಿ ನೆಲದ ಮೇಲೆ ಕುಳಿತು, ವಿದ್ಯಾಭ್ಯಾಸ ಮಾಡುತಿದ್ದರು; ಸ್ವಲ್ಪ ಸಮಯದನಂತರ ಗುರುವಿನ ಅಪ್ಪಣೆಯ ಮೇರೆ, ಶಿಷ್ಯರೆಲ್ಲರೂ ಯಜ್ಞಕ್ಕೆ ಸಮಿತ್ತುಗಳನ್ನು ತರುವುದಕ್ಕಾಗಲೀ ಗೋವುಗಳಿಗೆ ಹುಲ್ಲು ತರುವುದಕ್ಕಾಗಲೀ, ಹೋಗುತಿದ್ದರು. ಮಧ್ಯಾಹ್ನ



ಹೊತ್ತಿಗೆ ಗುರುವು ಶಿಷ್ಯರೊಂದಿಗೆ ಭೋಜನಮಾಡುತಿದ್ದನು; ಅನಂತರ ತಿರುಗಿ ಪಾಠ ಹೇಳುವುದಕ್ಕೆ ಆರಂಭವಾಗುತಿದ್ದಿತ್ತು. ಸಾಯಂಕಾಲದಲ್ಲಿ ಪುನಃ ಸಣ್ಣ ಪುಟ ಕೆಲಸಗಳಿಗೆ ಹೋಗುತಿದ್ದರು. ಕೆಲವರು ಹೂದೋಟದಲ್ಲಿ ಕೆಲಸ ಮಾಡುತಿದ್ದರು; ಕೆಲವರು ಹೂಗಿಡಗಳಿಗೆ ನೀರೆರೆಯುತಿದ್ದರು. ಹೀಗೆ ನಾನಾ ಪ್ರಕಾರವಾದ ಕೆಲಸಗಳನ್ನು ಮಾಡುತಿದ್ದರು. ಸಾಯಂಕಾಲವಾದನಂತರ ಶಿಷ್ಯರೂ ಸಂಧ್ಯಾವಂದನೆ ತೀರಿಸಿ, ಅಗ್ನಿಹೋತ್ರಾದಿಗಳನ್ನು ಮುಗಿಸಿಕೊಂಡು, ರಾತ್ರಿಭೋಜನಕ್ಕೆ ಸಿದ್ಧರಾಗುತಿದ್ದರು.

ಹೀಗಿರುವ ತರುಣರ ದಿನಚರ್ಯೆಯನ್ನು ನೋಡಿ ಯಾರಿಗೆ ತಾನೇ ಆನಂದವಾಗದಿರದು? ಯಾರಿಗೆ ತಾನೇ ಬ್ರಹ್ಮಚರ್ಯಾವಸ್ಥೆಯ ವಿದ್ಯಾರ್ಥಿ ದೆಸೆಯು ಸಂತೋಷವನ್ನೀಯದಿರದು? ಆ ಪ್ರಾಚೀನ ಕಾಲದ ಮಹಿಮೆಯೇ ಅಂತಹದು. ಆ ವಿದ್ಯಾಪೀಠಗಳ ಮಹಿಮೇ ಅದು! ಹೆಚ್ಚೇನು? ಆಗಿನ ಕಾಲದ ಆ ಹಳ್ಳಿಯೊಳಗಿನ ಗುರುಕುಲವೆಲ್ಲಿ? ಈಗಿನ ನಗರಗಳಲ್ಲಿನ ಕೊಲೇಜು ಹೈಸ್ಕೂಲುಗಳೆಲ್ಲಿ? ಹಿಂದಿನದೆಲ್ಲವೂ ಈಗ ಮಾಯವಾಗಿದೆ; ಈಗ ನಮಗುಳಿದಿರುವುದು 'ಶೃಂಗಾರವಾದ ತೋಟ' ಮಾತ್ರ; ನೋಡಿದರೆ, 'ಒಳಗೆ ತುಂಬಾ ಗೋಳೀ ಸೊಪ್ಪೇ' ಸರಿ!

ಹೀಗೆ ಗುರುಸಮ್ಮುಖದಲ್ಲಿ ಎಂಟು ಹತ್ತು ವರ್ಷಗಳ ತನಕ ವಿದ್ಯಾವ್ಯಾಸಂಗ ಮಾಡಿದನಂತರ, ಶಿಷ್ಯರ ಪಾಂಡಿತ್ಯವನ್ನು ಗುರುವೇ ಸ್ವತಃ ಪರೀಕ್ಷಿಸುತಿದ್ದನು. ಆದರೆ ಈ ಕಾಲದಂತೆ 'Question paper'ಗಳ (ಪ್ರಶ್ನಾಪತ್ರ) ಮೂಲಕ ಪರೀಕ್ಷೆಯು ನಡೆಯುತಿದ್ದಿಲ್ಲ. ಕೇವಲ ಬಾಯಿ ಮಾತಿನಿಂದಲೇ ಪರೀಕ್ಷೆಯಾಗುತಿದ್ದಿತು. ಗುರುವು ಮುಖ್ಯವಾಗಿ ಶಿಷ್ಯರ ಗುಣ ನಡತೆಗಳನ್ನೇ ಪರೀಕ್ಷಿಸುತಿದ್ದನು. ಶಿಷ್ಯರು ವಿದ್ಯೆಯಲ್ಲಿ ಪಾಂಡಿತ್ಯವನ್ನು ಹೊಂದಿದ ಮೇಲೆ, ಗುರು ಅವರು ಸ್ವಗೃಹಕ್ಕೆ ತೆರಳಿ ಸುಕನ್ಯೆಯರನ್ನು ವಿವಾಹವಾಗಿ ಸದ್ಧರ್ಮದಿಂದ ಗೃಹಸ್ಥಾಶ್ರಮ ಧರ್ಮವನ್ನು ಪರಿಪಾಲಿಸುವಂತೆ ಅವರಿಗೆ ಅಪ್ಪಣೆಕೊಡುತಿದ್ದನು. ಆಗ ಅವರು ಗುರುವಿನ ಪ್ರೀತಿಯಂತೆ ಗುರು ದಕ್ಷಿಣೆಯನ್ನು ಕೊಟ್ಟು,

आचार्याय प्रियं धनमाहृत्य शीक्षा ।

ಅವನಿಂದ ಆಶೀರ್ವಾದವನ್ನು ಪಡೆದು ಆನಂದದಿಂದ ಸ್ವಗೃಹಕ್ಕೆ ತೆರಳುತಿದ್ದರು. ಶಿಷ್ಯನು ತೆರಳುವಾಗ, "ನೀವು ಸಂತತಿಯುಕ್ತರಾಗಿಯೂ ಧಾರ್ಮಿಕರಾಗಿಯೂ ಸುಖದಿಂದ ಬಾಳಿರಿ" ಎಂದು ಗುರುವು ಆಶೀರ್ವದಿಸುತಿದ್ದನು.

ಪ್ರಿಯ ವಾಚಕರೇ, ಬಾಲಕರಾದ ವಿದ್ಯಾರ್ಥಿಗಳಿಗೆ, ಈ ಗುರುಕುಲದ ವಿದ್ಯಾಭ್ಯಾಸಕ್ಕಿಂತಲೂ ಅಧಿಕವಾದ ವ್ಯಾಸಂಗವು ಇನ್ನಾವುದು? ಗುರುಕುಲ ವಾಸಕ್ಕಿಂತಲೂ ಶ್ರೇಷ್ಠವಾದ ಹಾಗೂ ಸುಖವಾದ ವಾಸವು ಇನ್ನಾವುದು? ಗುರು

Digitized by ROJA MUTHIAH RESEARCH LIBRARY

ಭಕ್ತಿಗಿಂತಲೂ ದೊಡ್ಡದಾದ ಭಕ್ತಿಯು ಬೇರೊಂದಾವುದು? ಅಂಥಾ ಗುರುಕುಲಗಳ ದೆಸೆಯಿಂದಲೆ, ಪೂರ್ವಕಾಲದಲ್ಲಿ ನಮ್ಮ ಹಿಂದೂ ಆರ್ಯ ಜನಾಂಗವು ಅತ್ಯಂತ ಶ್ರೇಷ್ಠವಾದ ಸುಧಾರಣೆಯನ್ನು ಹೊಂದಿದ್ದಿತು!

ಪ್ರಾಚೀನ ಕಾಲದಲ್ಲಿ ಬಾಲಕರಿಗೆ ವಿದ್ಯಾಭ್ಯಾಸವು ದೊರಕುತಿದ್ದಂತೆ ಬಾಲಕಿಯರಿಗೂ ವಿದ್ಯಾಭ್ಯಾಸ ಕ್ರಮವಿದ್ದಿತು. ಸ್ತ್ರೀವಿದ್ಯಾಭ್ಯಾಸಕ್ಕೆ ಈಗಿದ್ದ ನಿಷೇಧದಂತೆ ಆಗಿನ ಕಾಲದಲ್ಲಿರಲಿಲ್ಲ. ಜೀವನ ಸಾರ್ಥಕ್ಯವನ್ನು ಸಾಧಿಸಿಕೊಳ್ಳುವುದಕ್ಕೆ ಸ್ತ್ರೀಯರಿಗೂ ತಕ್ಕಷ್ಟು ವಿದ್ಯೆಯು ಅಗತ್ಯವಿರುವುದೆಂಬುದು ಪ್ರಾಯಶಃ ನಮ್ಮ ಪೂರ್ವಜರಿಗೆ ಗೊತ್ತೇ ಇದ್ದಿತು. ಗೃಹಿಣಿಯಾಗತಕ್ಕ ಪ್ರತಿಯೊಬ್ಬಳೂ ವಿದ್ಯಾವತಿಯಾಗಿದ್ದಳು; ಋಗ್ವೇದ ಮಂತ್ರಗಳನ್ನು ರಚಿಸುವುದರಲ್ಲಿ ಸ್ತ್ರೀಯರೂ ಕೂಡ ಸಹಾಯಮಾಡಿದ್ದರೆಂದ ಮೇಲೆ, ಆ ಕಾಲದಲ್ಲಿ ಸ್ತ್ರೀವಿದ್ಯಾಭ್ಯಾಸವು ಎಷ್ಟರ ಮಟ್ಟಿಗಿತ್ತೆಂಬುದನ್ನು ಬೇರೆ ವಿವರಿಸಿ ಹೇಳಬೇಕಾದ ಅವಶ್ಯವಿಲ್ಲ.

ಹೀಗೆ ಹಿಂದೂ ವಿದ್ಯಾಭ್ಯಾಸ ಕ್ರಮವು ಬಹಳ ವಿಜೃಂಭಣೆಯಿಂದ ಬಹಳ ಕಾಲ ತನಕ ಯಾವ ತೊಂದರೆಯೂ ಇಲ್ಲದೆ ಮುಂದೆ ಸಾಗುತಿದ್ದಿತು. ಆ ಮೇಲೆ?

---



## ಎರಡನೆಯ ಪ್ರಕರಣ.

### ಬೌದ್ಧ ಧರ್ಮಕಾಲದ ವಿದ್ಯಾಭ್ಯಾಸ ಕ್ರಮ.

ಕಾಲವು ಬದಲುತ್ತಾ ಬಂದ ಹಾಗೆ ದೇಶದ ಸ್ಥಿತಿಯು ಬದಲಾಗುತ್ತಾ ಬಂದಿತು. ಜನರೊಳಗೆ ಐಕ್ಯವು ಹೆಚ್ಚುತ್ತಾ ಬಂದು, ಅವರೆಲ್ಲರೂ ಒಗ್ಗಟ್ಟಿನಿಂದ ದೇಶದ ಅಭಿವೃದ್ಧಿಗೆ ಕೆಲಸ ಮಾಡತೊಡಗಿದರು. ಇದರಿಂದ ಹಿಂದೂದೇಶದಲ್ಲಿ ಅಲ್ಲಲ್ಲಿ ಗುರುಕುಲಗಳೂ, ಅವುಗಳ ಬದಲಿಗೆ ಕೆಲವೆಡೆಗಳಲ್ಲಿ ದೊಡ್ಡ ದೊಡ್ಡ ವಿಶ್ವ ವಿದ್ಯಾಲಯಗಳೂ ಮೊಳೆದೋರಿದುವು. ಆದುದರಿಂದ ವಿದ್ಯಾಭ್ಯಾಸವು ಮೊದಲಿಗಿಂತಲೂ ಸಾರ್ವಜನಿಕ (Universal)ವಾಗಿ ಅಭಿವೃದ್ಧಿಗೆ ಬಂದಿತು. ಮಾತ್ರವಲ್ಲದೆ ವಿದ್ಯಾಂಗಗಳೂ ಒಂದೊಂದಾಗಿ ಅಭಿವೃದ್ಧಿಯನ್ನೈದಿದುವು. ಬೇರೆ ಬೇರೆ ಕಡೆಗಳಿಂದ ವಿದ್ಯಾರ್ಥಿಗಳು ಬಂದು ಒಂದೇ ಕಡೆಯಲ್ಲಿ ಸೇರತೊಡಗಿದರು. ಇಂಥಾ ಮಾರ್ಪಾಟವು ಬೌದ್ಧಧರ್ಮದ ಕಾಲದಲ್ಲಿಯಾಯಿತು; ಯಾಕಂದರೆ ಆರ್ಯಜನಾಂಗದ ವಿದ್ಯಾಭಿವೃದ್ಧಿಗೆ, ಬೌದ್ಧಮತಾನುಯಾಯಿಗಳು ಮಾಡಿದಷ್ಟು ಸಾಹಸವನ್ನು ಇನ್ನಾರೂ ಮಾಡಿರಲಿಲ್ಲ.

ಇಂಥಾ ವಿಶ್ವವಿದ್ಯಾಲಯಗಳ ಸ್ಥಿತಿಗತಿಯು ಹೇಗಿತ್ತೆಂಬುದನ್ನು ತಿಳಿದುಕೊಳ್ಳುವುದು ಅಗತ್ಯ. ಆದುದರಿಂದ ಕ್ರಿ. ಪೂ. ೧ನೇ ಶತಮಾನದಲ್ಲಿ ಸ್ಥಾಪಿತವಾಗಿದ್ದ ನಾಲಂದಾ ವಿಶ್ವವಿದ್ಯಾಲಯವನ್ನು ಕುರಿತು ಬರೆಯುವೆನು. ಈ ವಿವರಗಳನ್ನು ಪ್ರೊ| ವಸ್ವಾನಿ ('Prof. Vaswani')ಯವರ ಆರ್ಯರ ಧ್ಯೇಯಗಳು 'Aryan Ideal' ಎಂಬ ಪುಸ್ತಕದಿಂದ ಸಂಗ್ರಹಿಸಿರುವೆನು. ವಾಚಕರಿಗೆ ಇದರಿಂದ ಬಹಳ ಪ್ರಯೋಜನವಾಗಬಹುದೆಂದು ನಂಬಿರುವೆನು.

ನಾಲಂದಾ ವಿಶ್ವವಿದ್ಯಾಲಯವು ಕ್ರಿಸ್ತಪೂರ್ವ 100 ವರುಷಗಳಿಗೆ ಹಿಂದೆ, ಶಕ್ರಾದಿತ್ಯ ಎಂಬ ಅರಸನಿಂದ ಸ್ಥಾಪಿತವಾಯಿತು. ಇದರಿಂದ ರಾಜರೂ ಕೂಡಾ ಜನಾಂಗದ ವಿದ್ಯಾಭಿವೃದ್ಧಿಯಲ್ಲಿ ಭಾಗಿಗಳಾದ್ದರೆಂದು ನಾವು ಊಹಿಸಬಹುದು. ಈ ವಿಶ್ವವಿದ್ಯಾಲಯವನ್ನು ಕುರಿತು 700 ವರುಷಗಳನಂತರ, ಹ್ಯೂನ್‌ತ್ಸಾಂಗನೆಂಬವನು ಬರೆದಿಟ್ಟ ಸಂಗತಿಗಳಿಂದಲೆ ಈಗ ನಾವು ಆಗಿನ ಕಾಲದ ವಿದ್ಯಾಭ್ಯಾಸ ಕ್ರಮವನ್ನು ತಿಳಿದುಕೊಳ್ಳಬಹುದಾಗಿದೆ. ಹ್ಯೂನ್‌ತ್ಸಾಂಗನು ಒಬ್ಬ ವಿದ್ವಾಂಸನಾಗಿದ್ದನು; ಅವನು ಚೀನಾದೇಶದವನು. ಬೌದ್ಧಮತಕ್ಕೆ ಸೇರಿದವನಾಗಿದ್ದನು. ಅವನು ಏಳನೆಯ ಶತಮಾನದಲ್ಲಿ, ಎಂದರೆ ಹರ್ಷಚಕ್ರವರ್ತಿಯು ಹಿಂದುಸ್ಥಾನದಲ್ಲಿ ಆಳುತಿದ್ದ ಕಾಲದಲ್ಲಿ, ಹಿಂದೂದೇಶಕ್ಕೆ ಪ್ರವಾಸಿಯಾಗಿ ಬಂದವನು, ಸಾಧಾರಣ ಹನ್ನೆರಡು ವರುಷಗಳ ತನಕ ಹಿಂದೂದೇಶದ ಪ್ರಮುಖರಾಜ್ಯಗಳನ್ನೆಲ್ಲಾ ಸುತ್ತಿದನು.

T.44 N22

Digitized by ROJA MUTHIAH RESEARCH LIBRARY

ಅವನು ಆ ಕಾಲದಲ್ಲಿ ಬರೆದಿಟ್ಟ ಸಂಗತಿಗಳಿಂದ, ಆ ಕಾಲದ ಚರಿತ್ರೆ ಎಲ್ಲವನ್ನೂ ನಾವು ಅರಿತುಕೊಳ್ಳಬಹುದು.

ಹ್ಯೂನ್‌ತ್ಸಾಂಗನು ನಾಲಂದಾ ವಿಶ್ವವಿದ್ಯಾಲಯಕ್ಕೆ ಹೋದಾಗ ಅಲ್ಲಿ ವಿದ್ಯಾಲಯದ ಅಧ್ಯಕ್ಷ (President)ನು ಅವನನ್ನು ಕುರಿತು:—"ನೀವೆಷ್ಟು ವರುಷಗಳ ತನಕ ಪ್ರವಾಸಮಾಡಿದಿರಿ? ನೀವು ಇಲ್ಲಿಗೆ ಬರಲು ಕಾರಣವೇನು?" ಎಂದು ಕೇಳಲು ಅವನು, "ನಾನು ಮೂರು ವರುಷಗಳ ತನಕ ಪ್ರವಾಸ ಮಾಡಿದೆನು. ಯೋಗಶಾಸ್ತ್ರದ ಸೂತ್ರಗಳನ್ನು ಕಲಿಯುವುದಕ್ಕಾಗಿ ನಾನು ಚೀನಾದೇಶದಿಂದ ಇಲ್ಲಿಯ ತನಕ ಬರುವವನಾಗಿದ್ದೇನೆ" ಎಂದನು. ಹಿಂದೂ ವಿದ್ಯಾಭ್ಯಾಸದಲ್ಲಿ ಯೋಗಶಾಸ್ತ್ರವು ಮುಖ್ಯವಾದ ವಿದ್ಯಾಂಗವಾಗಿದ್ದಿತು. ನಾಲಂದಾ ವಿಶ್ವವಿದ್ಯಾಲಯವು ಆರ್ಥಿಕ, ಮಾನಸಿಕ, ಹಾಗೂ ಯೋಗೀಕ ವಿದ್ಯಾಂಗಗಳ ಕೇಂದ್ರಸ್ಥಾನವಾಗಿದ್ದಿತು.

ನಾಲಂದಾ ವಿಶ್ವವಿದ್ಯಾಲಯವು ಸ್ಥಾಪಿತವಾಗಿದ್ದ ಸ್ಥಳವು ಬಹಳ ವಿಸ್ತಾರವಾಗಿದ್ದಿತು; ವಿದ್ಯಾಲಯದ ಭಾಗವಾಗಿ ಒಂದು ವ್ಯವಸಾಯ ಶಾಲೆಯೂ ಇದ್ದಿತು. ಈ ವಿದ್ಯಾಲಯದ ವೆಚ್ಚಕ್ಕಾಗಿ ನೂರು ಗ್ರಾಮಗಳ ತೀರ್ವೆಯು ಸಲುತಿದ್ದಿತು. ಯೋಚಿಸಿದರೆ, ನಾಲಂದಾವಿದ್ಯಾಲಯವು ವ್ಯವಸಾಯ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಮಾಡುತ್ತ, ಒಂದು ಸ್ವಂತ ವಸಾಹತು (Colony) ಎಂಬಂತೆ ಇದ್ದಿತು.

ವಿದ್ಯಾಲಯದಲ್ಲಿನ ಪ್ರೊಫೆಸರರೂ ವಿದ್ಯಾರ್ಥಿಗಳೂ ಬರೇ ವಿದ್ಯಾಭ್ಯಾಸವನ್ನೂ ಯೋಗಾಭ್ಯಾಸವನ್ನೂ ಮಾತ್ರವಲ್ಲದೆ, ಬೇರೆ ಇತರ ಹೊಲಗೆಲಸಗಳನ್ನೂ ಮಾಡುತಿದ್ದರು. ಆರ್ಥಿಕ ವಿದ್ಯಾಭ್ಯಾಸವನ್ನೂ ಅವರು ಅಲ್ಲಗಳೆಯುತ್ತಿರಲಿಲ್ಲ. ಇಂಥಾ ವಿದ್ಯಾಲಯಗಳಲ್ಲಿ ಕಲಿತ ವಿದ್ಯಾರ್ಥಿಗಳಲ್ಲವೇ ಲೋಕವನ್ನು ಬೆಳಗಿಸಿದಂಥಾ ಮಹಾತ್ಮರು? ಆರ್ಥಿಕಾರ್ಜನೆಯು ಎಂಥ ದೊಡ್ಡ ಮಹಾತ್ಮರನ್ನೂ ಹೊಂದಿತ್ತು. ನೋಡಿರಿ! ಯೇಸುಕ್ರಿಸ್ತನು ಬಡಗಿಯಾಗಿ ಜೀವಿಸಲಿಲ್ಲವೆ? ಸೈಂಟ್‌ಪೊಲನು ತಂಬು ಹಾಕುವವನಾಗಿರಲಿಲ್ಲವೆ? ಕಬೀರನು ಸ್ವತಃ ನೇಯಿಗೆಯವನಾಗಿದ್ದನು. ಆದುದರಿಂದ ಅರ್ಥಶಾಸ್ತ್ರ ಸಂಬಂಧವಾದ ವಿದ್ಯಾರ್ಜನೆಯು ಪ್ರಾಮುಖ್ಯವಾದುದಾಗಿದ್ದಿತ್ತು.

ನಾಲಂದಾ ವಿಶ್ವವಿದ್ಯಾಲಯವು ಅರ್ಥಶಾಸ್ತ್ರದ ಕೇಂದ್ರಸ್ಥಾನವಾಗಿದ್ದಿತು. ಮಾತ್ರವಲ್ಲದೆ ಮಾನಸಿಕ ಶಾಸ್ತ್ರದ ಕೇಂದ್ರಸ್ಥಾನವೂ ಆಗಿದ್ದಿತು. ಆ ವಿಶ್ವವಿದ್ಯಾಲಯದಲ್ಲಿ ನೂರು ಕ್ಲಾಸುಗಳಿದ್ದುವು; ವಿದ್ಯಾರ್ಥಿಗಳು ಹತ್ತುಸಾವಿರವಿದ್ದರು; ರಸಾಯನಶಾಸ್ತ್ರವು ವಿದ್ಯಾಂಗಗಳಲ್ಲಿ ಒಂದಾಗಿದ್ದಿತು; ವಿದ್ಯಾಲಯದಲ್ಲಿ ಅನೇಕ ವೇಧಶಾಲೆಗಳು (Observatories) ಇದ್ದುವು. ಈ ವೇಧಶಾಲೆಗಳನ್ನು ಕುರಿತು



ಹ್ಯೂನ್‌ತ್ಸಾಂಗನು ಹೀಗೆಂದು ಬರೆದಿರುವನು:—"The observatories seemd to be lost in the vapours of the morning and the upper rooms tower above the clouds" ಎಂದರೆ, "ಮುಂಜಾವಿನ ಇಬ್ಬನಿಯಲ್ಲಿ ವೇಧಶಾಲೆಗಳು ಮಾಯವಾದಂತೆ ತೋರುತ್ತವೆ; ಮತ್ತು ಮೇಲಿನ ಕೋಣೆಗಳು ಮೋಡಗಳಿಂದಲೂ ಎತ್ತರಕ್ಕೆ ಹೋಗಿರುತ್ತವೆ." ಈ ವಾಕ್ಯದಲ್ಲಿ ತಕ್ಕಮಟ್ಟಿಗೆ ಉತ್ಪ್ರೇಕ್ಷೆ ಇರಬಹುದಾದರೂ, ವಿಶ್ವವಿದ್ಯಾಲಯದ ಕಟ್ಟಡವು ಬಹಳ ದೊಡ್ಡದಾಗಿಯೂ ವಿಶಾಲವಾಗಿಯೂ ಎತ್ತರವಾಗಿಯೂ ಇದ್ದಿತೆಂದು ಹೇಳುವುದಕ್ಕೆ ಅಡ್ಡಿಯಿಲ್ಲ. ವಿಶ್ವವಿದ್ಯಾಲಯದಲ್ಲಿ ಕಲಿಸಲ್ಪಡುವ ಪಾಠಗಳಲ್ಲಿ ತರ್ಕಶಾಸ್ತ್ರವೂ, ಸಾಹಿತ್ಯವೂ, ಕಲೆಗಳೂ, ವೈದ್ಯವೂ, ತತ್ವಶಾಸ್ತ್ರವೂ ಸೇರಿದ್ದುವು. ಬೌದ್ಧಮತ ಸಂಬಂಧವಾದ ಗ್ರಂಥಗಳೂ ಕಲಿಸಲ್ಪಡುತಿದ್ದುವು. ವಿದ್ಯಾರ್ಥಿಗಳು ಅವುಗಳನ್ನು ಅನನ್ಯಭಕ್ತಿಯಿಂದ ಕಲಿಯುತಿದ್ದರು.

ಆ ವಿಶ್ವವಿದ್ಯಾಲಯವನ್ನು ಬುದ್ಧದೇವನ ಮೇಲಿರುವ ತಮ್ಮ ಭಕ್ತಿಯ ಸೂಚನಾರ್ಥವಾಗಿ, ಕ್ರಮದಿಂದ (in succession) ಆರು ಜನ ಬೌದ್ಧ ರಾಜರು ಕಟ್ಟಿದ್ದರು. ಅದನ್ನು ಸ್ಥಾಪಿಸಿದವರೂ ಕಟ್ಟಿಸಿದವರೂ ಬೌದ್ಧರೇ ಆಗಿದ್ದರು. ಇದರಿಂದ ಆ ಕಾಲದ ಬೌದ್ಧರಿಗೆ ವಿದ್ಯಾಭ್ಯಾಸದ ಮೇಲೆ ಎಷ್ಟು ಭಕ್ತಿಯಿದ್ದಿತು, ನೋಡಿರಿ! ವಿದ್ಯಾಲಯವು ಬೌದ್ಧಮತದವರಿಗೆ ಮಾತ್ರವೇ ಇದ್ದಿಲ್ಲ. ಬೌದ್ಧಧರ್ಮವನ್ನು ಮಾತ್ರವೇ ಅಲ್ಲಿ ಕಲಿಸುತಿರಲಿಲ್ಲ; ಬೌದ್ಧಧರ್ಮಶಾಸ್ತ್ರದೊಂದಿಗೆ ಹಿಂದೂ ಧರ್ಮಶಾಸ್ತ್ರವನ್ನೂ ಕಲಿಸಿಕೊಡುತಿದ್ದರು. ಬ್ರಾಹ್ಮಣರಾದ ವಿದ್ಯಾರ್ಥಿಗಳು ಬೌದ್ಧಶಾಸ್ತ್ರದೊಂದಿಗೆ ವೇದಗಳನ್ನೂ ಶಾಸ್ತ್ರಗಳನ್ನೂ ಕಲಿಯುತಿದ್ದರು.

ನಾಲಂದಾ ವಿಶ್ವವಿದ್ಯಾಲಯದಲ್ಲಿ ವಿದೇಶಿಯ ಪಂಡಿತರೂ ಕೂಡ ಇದ್ದರೆಂದು, ಹ್ಯೂನ್‌ತ್ಸಾಂಗನು ಹೇಳಿರುವನು. ಇದರಿಂದ ಪ್ರಾಚೀನಕಾಲದಲ್ಲಿ ಹಿಂದೂ ಜನಾಂಗದವರಿಗೆ ವಿದೇಶಿಯ ವಿದ್ಯಾವಂತರ ಮೇಲೆ ಮತ್ಸರವಿದ್ದಿಲ್ಲವೆಂದು ನಾವು ತಿಳಿಯಬಹುದು. ಈಗ ಈ ದೇಶದಲ್ಲಿ ತಲೆದೋರುತ್ತಿರುವ ವರ್ಣಮತ್ಸರದ (Race-hatred) ಬಗ್ಗೆ, ನಾಲಂದಾ ವಿಶ್ವವಿದ್ಯಾಲಯದಲ್ಲಿ ಯಾವ ಯೋಚನೆಯೂ ಇದ್ದಿಲ್ಲ. ವಿದ್ಯಾವಂತರಾದವರೆಲ್ಲರಿಗೂ ಒಂದೇ ತರದ ಮಾನಮರ್ಯಾದೆಗಳು ದೊರಕುತಿದ್ದುವು; ಅವನು ಸತ್‌ಕುಲದಲ್ಲಿ ಹುಟ್ಟಿದವನು, ಇವನು ಕೀಳು ಕುಲದಲ್ಲಿ ಹುಟ್ಟಿದವನು, ಅವನು ಬ್ರಾಹ್ಮಣನು, ಇವನು ಅಬ್ರಾಹ್ಮಣನು, ಮತ್ತೊಬ್ಬನು ಬೌದ್ಧಮತದವನು ಎಂಬೀ ತರದ ಭೇದಾಭೇದಗಳೇ ಇದ್ದಿಲ್ಲ. ಪ್ರಾಯಶಃ ವಿದ್ಯಾವಂತರಾದವರೆಲ್ಲರೂ ಒಂದೇ ಸಮಾನವಾಗಿ ಕಾಣಲ್ಪಡುತಿದ್ದರು.

ಆ ವಿದ್ಯಾಲಯದಲ್ಲಿ ವಿಧೇಯತೆಯೂ ಪೂಜ್ಯತೆಯೂ ವಿದ್ಯಾರ್ಥಿಗಳಿಗೆ ಕಲಿಸಲ್ಪಡುತಿದ್ದುವು. ಪೂಜ್ಯತೆಯನ್ನು ಹಿರಿಯರಿಗೆ ಮಾತ್ರವಲ್ಲ; ಕಿರಿಯರಿಗೂ



Digitized by ROJA MUTHIAH RESEARCH LIBRARY

ಖಗಮೃಗಗಳಿಗೂ ಕೂಡಾ ತೋರಿಸುವಂತೆ ಕಲಿಸುತಿದ್ದರು. ನೋಡಿರಿ, ಇದೀಗ ಹಿಂದೂಧರ್ಮದ ನಿಜವಾದ ತತ್ವ! ಆ ಕಾಲದ ವಿದ್ಯಾರ್ಥಿಗಳು ವಿದೇಶಿಯರಿಂದಲಾದರೂ ತಮಗೆ ಅಪರಿಚಿತವಾದ ವಿದ್ಯೆಗಳನ್ನೂ ಕಲೆಗಳನ್ನೂ ವಿಧೇಯತೆಯಿಂದ ಕಲಿತುಕೊಳ್ಳಲು ನಾಚಿಕೆ ಪಡುತಿದ್ದಿಲ್ಲ.

ನಾಲಂದಾ ವಿಶ್ವವಿದ್ಯಾಲಯದಲ್ಲಿ ಹ್ಯೂನ್‌ತ್ಸಾಂಗನಿಗೆ ದೊರೆತ ಮನ್ನಣೆಯನ್ನು ನೋಡಿದರೆ, ಆ ಕಾಲದ ವಿದ್ಯಾಭ್ಯಾಸದ ಮಹತ್ವ ಎಷ್ಟಿತ್ತೆಂಬುದನ್ನು ತಿಳಿಯಬಹುದು. ಹ್ಯೂನ್‌ತ್ಸಾಂಗನು ದೊಡ್ಡ ವಿದ್ವಾಂಸನೆಂಬುದಾಗಿ ನಾವು ಹಿಂದೆಯೇ ಹೇಳಿದ್ದೇವಷ್ಟೇ; ಆದುದರಿಂದ ವಿದ್ವಾಂಸನಿಗೆ ದೊರೆಯುತಕ್ಕ ಸನ್ಮಾನವು ಅವನಿಗೆ ಸಿಗಬೇಕಾಗಿದ್ದಿತು. ವಿಶ್ವವಿದ್ಯಾಲಯದ ನಾಲ್ಕು ಮಂದಿ ಪ್ರಮುಖರಾದ ವಿದ್ವಾಂಸರು ಅವನನ್ನು ಇದಿರುಗೊಳ್ಳುವುದಕ್ಕೆ ಏಳು ಯೋಜನ ದೂರ ಬಂದಿದ್ದರು. ಅವನು ಆಗ ಒಂದು ಹಳ್ಳಿಯಲ್ಲಿ ಸಂಚರಿಸುತಿದ್ದನು. ಆ ನಾಲ್ಕು ಮಂದಿ ವಿದ್ವಾಂಸರು ಅವನಿದ್ದಲ್ಲಿಗೆ ತಲಪಿದೊಡನೆ, ಅವರ ಹಿಂದೆಯೇ 200 ಮಂದಿ ಉಪಾಧ್ಯಾಯರೂ, ಮತ್ತು ಅನೇಕಾನೇಕ ಸಾಮಾಜಿಕ ಹಿತಚಿಂತಕರೂ, ಹ್ಯೂನ್‌ತ್ಸಾಂಗನನ್ನು ವಿಶ್ವವಿದ್ಯಾಲಯಕ್ಕೆ ಬರಮಾಡಿಕೊಳ್ಳುವುದಕ್ಕೆ ಬಂದು ಸೇರಿದರು. ಅವನನ್ನವರು ಬಹಳ ಸಂಭ್ರಮದಿಂದ ನಾಲಂದಕ್ಕೆ ಕರೆದುಕೊಂಡು ಹೋಗಿ, ಎಲ್ಲರೂ ಬಹಳ ಪ್ರೀತಿಯಿಂದ ಸತ್ಕರಿಸಿದರು. ಅವನನ್ನು ಅಧ್ಯಕ್ಷನ ಬಳಿಯಲ್ಲಿ ಪ್ರತ್ಯೇಕವಾದೊಂದು ಆಸನದಲ್ಲಿ ಕುಳ್ಳಿರಿಸಿದರು: ಅಷ್ಟರಲ್ಲಿ ಆ ಚೀನಿ ವಿದ್ವಾಂಸನ ಆಗಮನವನ್ನು ಸೂಚಿಸುವುದಕ್ಕೆ ಘಂಟಾನಾದವನ್ನು ಮಾಡಿದರು. ಅನಂತರ ಒಬ್ಬ ಉಪಾಸಕನೂ ಒಬ್ಬ ಬ್ರಾಹ್ಮಣನೂ ಅವನ ಸಂಗಡ ಆನೆಯ ಮೇಲೇರಿ ಹೋದರು. ಎಂಥಾ ಆಮಂತ್ರಣ! ವಿದ್ಯಾವಂತರಿಗೆ ಎಂಥಾ ಸತ್ಕಾರ! ಪ್ರಾಚೀನ ಆರ್ಯರಿಗೆ ವಿದ್ಯಾಪ್ರಪಂಚದಲ್ಲಿ ವರ್ಣಮತ್ಸರವು ಇದ್ದಿತಾದರೆ, ಚೀನಾದೇಶದವನಿಗೆ ಇಷ್ಟೊಂದು ತರದ ಸತ್ಕಾರವು ದೊರೆಯುತಿದ್ದಿತೆ? ಹಿಂದೂ ವಿಶ್ವವಿದ್ಯಾಲಯದಲ್ಲಿ ವಿದೇಶಿಯ ವಿದ್ವಾಂಸರಿಗೆ ಸ್ಥಳವು ದೊರೆಯುತಿದ್ದಿತೆ?

ನೈತಿಕ ಶಿಕ್ಷಣಕ್ಕಾದರೂ ಆ ವಿದ್ಯಾಲಯದಲ್ಲಿ ಪ್ರಾಮುಖ್ಯತೆ ಇದ್ದಿತು. ಮಾನವ ಜೀವನವು ಸಾರ್ಥಕವಾಗಬೇಕಾದರೆ, ಉಚ್ಚವಾದ ನೈತಿಕ ಶಿಕ್ಷಣವೇ ಮಾನವನಿಗೆ ಸಹಾಯಮಾಡುವುದೆಂಬುದನ್ನು ಅಲ್ಲಿನ ವಿದ್ವಾಂಸರು ತಿಳಿದಿದ್ದರು. ಅದರಂತೆಯೆ ಅವರು ಪ್ರತಿಯೊಬ್ಬ ವಿದ್ಯಾರ್ಥಿಗೂ ಅಗತ್ಯವಾಗಿ ನೈತಿಕ ಶಿಕ್ಷಣವನ್ನು ಕೊಡುತಿದ್ದರು.

ಬೌದ್ಧ ಕಾಲಕ್ಕಿಂತಲೂ ಹಿಂದಿನ ವೇದಕಾಲದಲ್ಲಿ ಹಿಂದೂ ವಿದ್ಯಾಭ್ಯಾಸದ ಕೇಂದ್ರಸ್ಥಾನಗಳಾದ ಆಶ್ರಮಗಳೂ ಪ್ರಕೃತಿಯಿಂದಲೂ ಕಲೆಗಳಿಂದಲೂ ಸುಸಜ್ಜಿತವಾಗಿ ಮಾಡಲ್ಪಟ್ಟ 'ತಪೋವನ'ಗಳೂ ಇದ್ದುವೆಂಬುದನ್ನು ನಾವು ಹಿಂದೆ ಹೇಳಿರುವೆವು.



ಹಾಗೆಯೇ ನಾಲಂದಾ ವಿಶ್ವವಿದ್ಯಾಲಯವು ವಿಸ್ತಾರವೂ ಸುಂದರವೂ ಪ್ರಾಕೃತಿಕವೂ ಆದ ಸ್ಥಳದಲ್ಲಿ ಕಟ್ಟಲ್ಪಟ್ಟಿದ್ದಿತು. ಅದರ ಸುಂದರವಾದ ಗೋಪುರಗಳ ಹಾಗೂ, 'ಗುಡ್ಡಗಳ ತುದಿಯಂತೆ ಕಾಣುವ ಉಪ್ಪರಿಗೆಗಳ' ವಿಷಯವಾಗಿ ಹ್ಯೂನ್‌ತ್ಸಾಂಗನು ಹೇಳಿರುವನು. ಮಾತ್ರವಲ್ಲದೆ, "From the windows one may see every hour the winds and the clouds produce new forms; and above the soaring eyes one may see the Conjunction of the sun and moon" ಎಂದು ಕೂಡ ಬರೆದಿರುವನು. ಇದರಿಂದ ಆ ವಿಶ್ವವಿದ್ಯಾಲಯದ ಕಟ್ಟಡವು ಎಷ್ಟು ದೊಡ್ಡದಾಗಿದ್ದಿತು ಎಂಬುದನ್ನು ನೀವೇ ಊಹಿಸಿರಿ! ವಿದ್ಯಾಲಯದ ಸುತ್ತಲೂ ಶೋಭಿಸುತಿದ್ದ ವಿಶಾಲವಾದ ಭೂಮಿಯಲ್ಲಿ ಅಲ್ಲಲ್ಲಿ ಮಾವಿನ ಮರದ ತೋಪುಗಳೂ, ಅಲ್ಲಲ್ಲಿ ಚಿಕ್ಕ ಚಿಕ್ಕ ಸರೋವರಗಳೂ ಇದ್ದು, ಸೃಷ್ಟಿಯ ಸೌಂದರ್ಯ ರಾಶಿಯನ್ನು ಅಭಿವೃದ್ಧಿಗೊಳಿಸುತಿದ್ದುವು. ಇಂಥಾ ಸೃಷ್ಟಿ ದೇವತೆಯ ಮಗ್ಗುಲಲ್ಲೇ ನಮ್ಮ ಪೂರ್ವಜರು ಕುಳಿತುಕೊಂಡು ವಿದ್ಯಾಭ್ಯಾಸವನ್ನು ನಡೆಸುತಿದ್ದರು. ಇದರಿಂದ ಸೃಷ್ಟಿದೇವತೆಯು ಮಾನವನ ವಿದ್ಯಾಭಿವೃದ್ಧಿಯಲ್ಲಿ ಹೆಚ್ಚಿನ ಸಹಾಯವನ್ನು ಮಾಡುತಿದ್ದಳು.

ಪ್ರಾಚೀನ ಕಾಲದ ವಿದ್ಯಾಭ್ಯಾಸದಲ್ಲಿ ಆರೋಗ್ಯದ ವಿಷಯದಲ್ಲಿ ಹೆಚ್ಚು ಜಾಗ್ರತೆಯು ಸಲುತಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಯೂ ವ್ಯಾಯಾಮವನ್ನು ಮಾಡುತಿದ್ದನು. 'A healthy mind in a healthy body' ಎಂಬ ಇಂಗ್ಲಿಷ್ ಸಾಮತಿಯಂತೆ ದೇಹಾರೋಗ್ಯವು ಸರಿಯಾಗಿದ್ದರೇನೇ ವಿದ್ಯಾಭ್ಯಾಸವು ಸರಿಯಾಗಿ ನೆರವೇರುವುದು. "Students and teachers at Nalanda never sat to studies or entered the Temple of Worship without a physical preparation; cleansing of the body, right regard for dress and diet, breathing exercises and periodical fasts, were deemed essential to intellectual and æsthetic life" (Aryan Ideal) ವಿದ್ಯಾರ್ಥಿಗಳಾಗಲೀ ಉಪಾಧ್ಯಾಯರಾಗಲೀ ಆರೋಗ್ಯಕ್ಕೋಸ್ಕರ ಆಗಿಂದಾಗ್ಗೆ ಉಪವಾಸಮಾಡುತಿದ್ದರು.

ಅಧ್ಯಾಪಕರೆಲ್ಲರೂ ಬಹಳ ದಯೆಯುಳ್ಳವರಾಗಿದ್ದರು. (The teachers .......were full of grace) ವಿದ್ಯಾರ್ಥಿಗಳು ಆರೋಗ್ಯವಂತರಾಗಿ ಬಹಳ ನಮ್ರರಾಗಿದ್ದರು. ಉಡಿಗೆತೊಡಿಗೆಗಳಲ್ಲಿ ಅವರೆಷ್ಟು ಸರಳರಾಗಿದ್ದರೆಂಬುದನ್ನು ಈ ಕೆಳಗಿನ ಮಾತುಗಳಿಂದ ತಿಳಿಯಬಹುದು: –

'Their requisites were four—clothes, food, bedding, medicine; and these were given them free; there was no



Digitized by ROJA MUTHIAH RESEARCH LIBRARY

system of fees........; their diet consisted of fruit, nuts, rice, butter and milk' (Aryan Ideal) ಎಂದರೆ 'ವಸ್ತ್ರ, ಆಹಾರ, ಹಾಸಿಗೆ, ಔಷಧಿ—ಇವು ನಾಲ್ಕೇ ಅವರಿಗೆ ಅವಶ್ಯವಿದ್ದುವು; ಇವುಗಳು ಅವರಿಗೆ ಧರ್ಮಾರ್ಥವಾಗಿ ಕೊಡಲ್ಪಡುತಿದ್ದುವು; ಸಂಬಳಕೊಡುವ ಪದ್ಧತಿಯು ಆಗ ಇದ್ದಿಲ್ಲ; ಹಣ್ಣು ಹಂಪಲುಗಳೂ, ಅನ್ನ ಹಾಲುಬೆಣ್ಣೆಗಳೂ ಅವರ ಮುಖ್ಯ ಆಹಾರವಾಗಿದ್ದಿತು. ಈ ಕಾಲದ ವಿದ್ಯಾರ್ಥಿಗಳಿಗೆ ಜೀವನಕ್ಕೆಷ್ಟು ಹಣ ವೆಚ್ಚವಾಗುವುದು ನೋಡಿರಿ; ಒಬ್ಬನು ಬಿ. ಎ. ಪಾಸ್‌ಮಾಡಬೇಕಾದರೆ ಕಮ್ಮಿ ಪಕ್ಷಕ್ಕೆ ಎರಡು ಸಾವಿರ ರೂಪಾಯಿಗಳಾದರೂ ಬೇಕು. ಆದರೆ ಪೂರ್ವಕಾಲದಲ್ಲಿ ಬಹಳ ಕಡಿಮೆ ಖರ್ಚಿನಿಂದ ಒಬ್ಬನು ಎಷ್ಟೋ ದೊಡ್ಡ ವಿದ್ವಾಂಸನಾಗಬಹುದಿತ್ತು.

ನಾಲಂದಾ ವಿಶ್ವವಿದ್ಯಾಲಯದ ಉದ್ದೇಶವು 'ಹಣ, ಬಿರುದು, ಅಲಂಕಾರಗಳಾಗಿರಲಿಲ್ಲ; ಅದರ ಇಡೀ ಉದ್ದೇಶವು ಬರೇ 'ಲೋಕಸೇವೆಯೇ' ಆಗಿದ್ದಿತು. ಪ್ರಥಮದಲ್ಲಿ ಈ ವಿದ್ಯಾಲಯವನ್ನು ಕಟ್ಟಿಸಿದ ಬೌದ್ಧರಾಜನು ಬಡಬಗ್ಗರ ದುಃಸ್ಥಿತಿಯನ್ನು ನೋಡಿ ಕನಿಕರಪಟ್ಟು ತನ್ನ ಸರ್ವಸ್ವವನ್ನು ಅವರ ಸೇವೆಯಲ್ಲೇ ವೆಚ್ಚಮಾಡಿದನು. ಇದಲ್ಲವೆ ನಿಜವಾದ ಲೋಕಸೇವೆ!

ಈ ಎಲ್ಲಾ ಸಂಗತಿಗಳಿಂದ ಆಗಿನ ಕಾಲದ ವಿದ್ಯಾಭ್ಯಾಸದ, ಹಾಗೂ ವಿದ್ಯಾಲಯಗಳ ಸ್ಥಿತಿಗತಿಗಳು ಮನಸ್ಸಿಗೆ ಮುಂದಟ್ಟಾಗುವಂತಿವೆ. ಕೆಲವೆಡೆಗಳಲ್ಲಿ ವಿದ್ಯಾಲಯಗಳ ಬದಲಿಗೆ, ಬೌದ್ಧ ದೇವಾಲಯಗಳಲ್ಲೇ ವಿದ್ಯಾಭ್ಯಾಸವು ಸಾಗುತಿದ್ದಿತು.

ಬೌದ್ಧಮತದ ಕಾಲದಲ್ಲಿ ಹಲವು ವಿದ್ವಾಂಸರು ಸಭೆ ಕೂಡಿ ತರ್ಕವಿತರ್ಕಗಳನ್ನು ಮಾಡುತಿದ್ದರು. ಹರ್ಷ ಚಕ್ರವರ್ತಿಯು ಇಂಥಾ ತಾರ್ಕಿಕರ ಸಭೆಯನ್ನು ಆಗಾಗ್ಗೆ ಪ್ರಯಾಗದಲ್ಲಿ ಕೂಡಿಸುತಿದ್ದನೆಂಬುದಾಗಿ, ಹ್ಯೂನ್‌ತ್ಸಾಂಗನು ಹೇಳಿರುವನು; ಮಾತ್ರವಲ್ಲದೆ, ಪ್ರಯಾಗದಲ್ಲಿ ಕಡೆಯ ಸಲ ನಡೆದ ತಾರ್ಕಿಕರ ಸಭೆಗೆ, ತಾನೇ ಅಧ್ಯಕ್ಷನಾಗಿದ್ದೆನೆಂದು ಹೇಳಿರುವನು! ಇಲ್ಲಿಯೂ ಕೂಡಾ, ಹಿಂದೂ ಜನರು ವಿದ್ಯಾವಂತನನ್ನು, ದೇಶಿಯನೋ ವಿದೇಶಿಯನೋ ಎಂದು ನೋಡದೆ, ಬಹಳ ಮಾನಿಸುತಿದ್ದರೆಂಬುದನ್ನು ನೋಡಬಹುದು!!

ಆದರೆ ಮಾಡುವುದೇನು? ಕಾಲನ ಕಾಲಿನ ತುಳಿದಾಟದಿಂದ ಹಿಂದಿನದೆಲ್ಲವೂ ಮಣ್ಣುಪಾಲಾಗಿದೆ; ಹೇ ಕಾಲಭಯಂಕರನೇ! ಪೂರ್ವಕಾಲದ ವಿದ್ಯಾಭ್ಯಾಸಕ್ರಮದ ಒಂದಿಷ್ಟು ಭಾಗವನ್ನಾದರೂ ನಮ್ಮವರಿಗಾಗಿ ಬಾಕಿ ಇಡಬಾರದಿತ್ತೆ?



## 3ನೆಯ ಪ್ರಕರಣ.*

### ಮುಸಲ್ಮಾನರ ಕಾಲದ ಹಿಂದೂದೇಶದ ವಿದ್ಯಾಭ್ಯಾಸ ಕ್ರಮ.

ಹಿಂದೂದೇಶವು ಮಹಮ್ಮದೀಯ ರಾಜರ ವಶವಾಯಿತು; ಇಲ್ಲಿ ಮಹಮ್ಮದೀಯರ ನಾಗರೀಕತೆಯು ಮೊಳೆದೋರಿತು. ರಾಜ್ಯಭಾರಕ್ರಮವು ತೀರಾ ಮಹಮ್ಮದೀಯವೇ ಆಯಿತು. ಅವರ ಆಗಮನದಿಂದ ಹಿಂದೂದೇಶದ ನಾಗರೀಕತೆಯು ರೂಪು ಬದಲಾಯಿತು; ದೇವಾಲಯಗಳು ಕಡಿಮೆಯಾದುವು; ವಿದ್ಯಾಲಯಗಳೆಲ್ಲವೂ ಮೆಲ್ಲಮೆಲ್ಲನೆ ಲಘುವಾದುವು; 'ಗುರುಕುಲ'ಗಳಂತೂ ಕಾಣದಾದುವು. ಆದುದರಿಂದ ಹಿಂದೂ ಜನರ ವಿದ್ಯಾಭ್ಯಾಸಕ್ರಮವು ತೀರ ಮಂದವಾಯಿತು. ಆರ್ಯರ ಸಂಸ್ಕೃತ ಭಾಷೆಯು ಮೆಲ್ಲಮೆಲ್ಲನೆ ಮೂಲೆ ಸೇರಿ, ಅದರ ಬದಲಿಗೆ ಅನೇಕ ಭಾಷೆಗಳು ಮೊಳೆದೋರಿದುವು. ಆದುದರಿಂದ ಸಾರ್ವಜನಿಕವಾದ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಸಾಧ್ಯವಿರಲಿಲ್ಲ. ಯಾವ ಮಹಮ್ಮದೀಯ ಅರಸನೂ ಹಿಂದೂ ವಿದ್ಯಾಲಯಗಳ ವಿಷಯದಲ್ಲಿ ಪ್ರೋತ್ಸಾಹ ಕೊಟ್ಟಂತೆ ತೋರುವುದಿಲ್ಲ.

ಅಂತೂ ಅಲ್ಲಲ್ಲಿ ಕೆಲವು ಪ್ರಾಥಮಿಕ ಶಾಲೆಗಳಿದ್ದುವು; ಅವುಗಳಲ್ಲಿ ಜನರು ತಕ್ಕಮಟ್ಟಿಗೆ ವಿದ್ಯಾಭ್ಯಾಸವನ್ನು ಹೊಂದುತಿದ್ದರು. ಈ ತೆರದ ವಿದ್ಯಾಭ್ಯಾಸ ಕ್ಷೀಣತೆಗೆ ಆ ಕಾಲದ ರಾಜ್ಯದ ಅಶಾಂತತೆಯೇ ಮುಖ್ಯ ಕಾರಣವಾಗಿದ್ದಿತು. ದೇಶದಲ್ಲಿ ಎಲ್ಲೆಲ್ಲೂ ಆಗಾಗ್ಗೆ ಯುದ್ಧಗಳು ಸಂಭವಿಸುತಿದ್ದು ಜನರಿಗೆ ಶಾಂತವಾಗಿ ವಿದ್ಯಾರ್ಜನೆಮಾಡುವುದಕ್ಕೆ ಆಗುತ್ತಿರಲಿಲ್ಲ. ಮೇಲಾಗಿ ಮಹಮ್ಮದೀಯರು ಹಿಂದುಗಳನ್ನು ಸಹೋದರ ಭಾವದಿಂದ ಕಾಣುತ್ತಿರಲಿಲ್ಲ. ಹಿಂದುಗಳನ್ನೂ ಅವರ ವಿದ್ಯಾಭ್ಯಾಸವನ್ನೂ ಪ್ರಾಯಶಃ ಅವರು ಮಾನಿಸಲಿಲ್ಲ. ಇದರಿಂದ ಹಿಂದುಗಳಿಗೆ ತಮ್ಮ ವಿದ್ಯಾಭ್ಯಾಸದಲ್ಲಿ ದಿನೇ ದಿನೇ ನಿರುತ್ಸಾಹವುಂಟಾಗಿ ಪ್ರೌಢವಿದ್ಯಾಭ್ಯಾಸಕ್ರಮವು ನಿಂತುಹೋಯಿತು.

ಮುಸಲ್ಮಾನರಾದರೂ ವಿದ್ಯಾಭಿವೃದ್ಧಿಗೆ ಹೆಚ್ಚು ಯತ್ನಮಾಡಿದಂತೆ ತೋರುವುದಿಲ್ಲ. ವಿದ್ಯಾಭ್ಯಾಸವು ಸಾರ್ವಜನಿಕವಾಗಿದ್ದಿಲ್ಲ; ಅಂತೂ ರಾಜ್ಯಭಾರಕ್ರಮದಲ್ಲಿ ಈ ವಿದ್ಯಾಪ್ರಚಾರದ ಕಾರ್ಯಕ್ಕೆ ಯಾವ ಕಾನೂನೂ ಇರಲಿಲ್ಲ. ಜನರು ತಾವೇ ಸ್ವಂತವಾಗಿಯಾಗಲಿ ಇಲ್ಲವೆ ಸುಪ್ರಸಿದ್ಧ ವಿದ್ವಾಂಸರ ಬಳಿಯಲ್ಲಾಗಲಿ ವಿದ್ಯಾರ್ಜನೆ ಮಾಡಬೇಕಾಗಿದ್ದಿತು. ಇದೂ ಕೂಡ ಕೇವಲ ಐಶ್ವರ್ಯವಂತರಿಗೆ ಸಾಧ್ಯವಿತ್ತಲ್ಲದೆ ಬಡವರಿಗೆ ಸಾಧ್ಯವಿರುತ್ತಿರಲಿಲ್ಲ.

* ಈ ಪ್ರಕರಣಕ್ಕೆ Prof. Jadunath Sarcar' ರವರ 'Studies in Mogul India' ಆಧಾರ.

Digitized by ROJA MUTHIAH RESEARCH LIBRARY

ಸುಲ್ತಾನನಾಗಲಿ ಬಾದಶಹನಾಗಲಿ ಮಸೀದಿಗಳಿಗೂ ಮಠಗಳಿಗೂ ಯತಿಗಳಿಗೂ ವಿದ್ವಾಂಸರಿಗೂ ದೊಡ್ಡ ಭೂಮಿಗಳನ್ನಾಗಲಿ ಹೆಚ್ಚು ಹಣವನ್ನಾಗಲಿ ದಾನವಾಗಿ ಕೊಡುತಿದ್ದನು. ಈ ದಾನವು ಧರ್ಮಪರವಾಗಿದ್ದಿತೇ ವಿನಾ ರಾಜನೀತಿಪರವಾಗಿ ಇರಲಿಲ್ಲ. ಈ ದಾನಗಳನ್ನು ಪಡಕೊಂಡವರು ವಿದ್ಯಾಲಯಗಳನ್ನು ಸ್ಥಾಪಿಸಲೇಬೇಕೆಂಬ ನಿರ್ಬಂಧವೇನೂ ಇದ್ದಿಲ್ಲ. ಆದರೆ ಕೆಲವು ದೇಶಾಭಿಮಾನಿಗಳು ಜನರಿಗೋಸ್ಕರ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತಿದ್ದರು. ಇಂತಹ ಸಂಸ್ಥೆಗಳು ಕೇವಲ ವಿರಳವಾಗಿದ್ದುವು.

ನಿಜವಾಗಿ ನೋಡಿದರೆ ಮುಸಲ್ಮಾನ ಅರಸುಗಳ ಆಳ್ವಿಕೆಯಲ್ಲಿ ಪ್ರಾಥಮಿಕ ಶಿಕ್ಷಣವು ಸರಿಯಾಗಿ ದೊರೆಯುತಿದ್ದಿತೆಂದು ಹೇಳಬಹುದು. ಪ್ರತಿಯೊಂದು ಮಶೀದಿಯ ಬಳಿಯಲ್ಲೂ ಒಂದು ಪ್ರಾಥಮಿಕ ಪಾಠಶಾಲೆಯು ಇದ್ದಿತು. ಅದಕ್ಕೆ 'ಮಖ್ತಬ್' ಎಂಬ ಹೆಸರಿದ್ದಿತು. ಆ ಪಾಠಶಾಲೆಯಲ್ಲಿ ಮಸೀದಿಯ 'ಮುಲ್ಲ'ನು ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಬಾಲಕ ಬಾಲಕಿಯರನ್ನು ಕೂಡಹಾಕಿ ಅವರಿಗೆ ಅಕ್ಷರಾಭ್ಯಾಸವನ್ನೂ ಖುರಾನನ್ನೂ ಕಲಿಸುತಿದ್ದನು. ಖುರಾನನ್ನು ಪ್ರತಿಯೊಬ್ಬ ಮುಸಲ್ಮಾನ ವಿದ್ಯಾರ್ಥಿಯೂ ಅಗತ್ಯವಾಗಿ ಬಾಯಿಪಾಠ ಕಲಿಯಬೇಕಾಗಿದ್ದಿತು. ಆದರೆ ಇಂಥಾ ವಿದ್ಯಾಭ್ಯಾಸವು ಕೇವಲ ಪ್ರಾಥಮಿಕ ತರದ್ದಾಗಿಯೇ ಇದ್ದಿತು.

ಕೆಲವು ಮಠಗಳಲ್ಲಿ ('ಖಂಕಗಳಲ್ಲಿ') ಹಲವು ಮಂದಿ ವಿದ್ವಾಂಸರೂ ವೇದಶಾಸ್ತ್ರಜ್ಞರೂ ಇದ್ದರು; ಆದರೆ ದಡ್ಡರೂ ನಿರಕ್ಷರಕುಕ್ಷಿಗಳೂ ಆದ ತಿರುಕುಳಿಗಳೂ ಅವರಿಗಿಂತ ಎಷ್ಟೋ ಹೆಚ್ಚಾಗಿದ್ದುದರಿಂದ ಮಠಗಳು ಪ್ರೌಢವಿದ್ಯಾಭ್ಯಾಸದ ಕೇಂದ್ರಸ್ಥಾನಗಳಾಗಿರಲಿಲ್ಲ. ಹಾಗೂ ಅಲ್ಲಲ್ಲಿ ಕೆಲವು ಪಟ್ಟಣಗಳಲ್ಲಿ ಮುಸಲ್ಮಾನ ವಿದ್ವಾಂಸರಿರುತಿದ್ದರು; ಇವರು ವಂಶಪಾರಂಪರ್ಯವಾಗಿ ವಿದ್ವಾಂಸರಾಗಿದ್ದರು. ಇಂಥ ವಿದ್ವಾಂಸರು ಆ ಕಾಲದಲ್ಲಿ ತತ್ತ, ಅಯೋಧನ, ಸಯಾಲ್‌ಕಟ್, ಸರ್‌ಹಿಂದ್, ಕನೋಜ, ನಾಗೋರ್, ಅಹಮದಾಬಾದ್, ಪಾಟ್ಣ, ಜಾನ್‌ಪುರ ಮೊದಲಾದ ಪ್ರಸಿದ್ಧ ಪಟ್ಟಣಗಳಲ್ಲಿದ್ದರು. ಇವರ ವಿದ್ವತ್ತಿನ ಮಹಿಮೆಯನ್ನು ಕೇಳಿ ಹಲವು ವಿದ್ಯಾರ್ಥಿಗಳು ಬೇರೆ ಬೇರೆ ದೇಶಗಳಿಂದ ಇವರ ಹೈಸ್ಕೂಲುಗಳಿಗೆ ಬಂದು ಪ್ರತ್ಯಪ್ರತ್ಯೇಕ ವಿದ್ಯಾಂಗಗಳಲ್ಲಿ ಪ್ರೌಢವಿದ್ಯಾಭ್ಯಾಸ ಹೊಂದುತಿದ್ದರು.

ಇಂತಹ ಮುಸಲ್ಮಾನ ವಿದ್ವಾಂಸರಿಗೆ ಅರಸನಿಂದ ಧನದಾನವು ಕೆಲವು ವೇಳೆ ದೊರಕುತಿದ್ದರೂ ಇವರ ವಿದ್ಯಾಲಯಗಳಿಗೆ ಪ್ರತ್ಯೇಕವಾಗಿ ಸರಕಾರದಿಂದ ಸಹಾಯವು ದೊರಕುತಿದ್ದಿಲ್ಲ. ಒಬ್ಬ ವಿದ್ವಾಂಸನ ಜೀವನವು ಸ್ವಭಾವತಃ ಅವನ ಸ್ವಸಾಮರ್ಥ್ಯದ ಮೇಲೆ ಹೊಂದಿಕೊಂಡಿದ್ದಿತಲ್ಲದೆ, ಬೇರೆ ವಿಧದಿಂದ ಅವನ ವಿದ್ಯಾಪ್ರಚಾರಕಾರ್ಯಕ್ಕೆ ಯಾವ ತರದ ಸಹಾಯವೂ ದೊರಕುತಿರಲಿಲ್ಲ. ಅವೆಲ್ಲವೂ ಅವನ ಸ್ವಂತ ಕುಟುಂಬಕ್ಕೆ ಸಂಬಂಧಿಸಿದ್ದುವಾಗಿದ್ದುವು. ಆದರೆ ಕಟಕಡೆಗೆ



ಒಂದು ಕುಟುಂಬದಲ್ಲಿ ವಿದ್ವಾಂಸರಿಲ್ಲದಾದ ಮೇಲೆ ಅಲ್ಲಿಯ ವಿದ್ಯಾಭ್ಯಾಸವು ನಿಂತುಹೋಗುತಿದ್ದಿತು.

ಪ್ರಸ್ತುತಕಾಲದಲ್ಲಿ ಸಂಸ್ಕೃತ ಅರಬಿ ಈ ಎರಡು ಭಾಷೆಗಳು 'ಮೃತಭಾಷೆಗಳಾ'ಗಿವೆಯಷ್ಟೆ. ಸಂಸ್ಕೃತ ಭಾಷೆಯು ಪೂರ್ವಕಾಲದಲ್ಲಿ ಹೇಗೆ ಗ್ರಂಥಸ್ಥ ಭಾಷೆಯೂ ಮಾತನಾಡುವ ಭಾಷೆಯೂ ಆಗಿದ್ದಿತೋ, ಮುಸಲ್ಮಾನರ ಕಾಲದಲ್ಲಿ ಹಿಂದೂದೇಶದಲ್ಲಿ ಅರಬಿ ಭಾಷೆಯು ಗ್ರಂಥಸ್ಥ ಭಾಷೆಯೂ ಮಾತನಾಡುವ ಭಾಷೆಯೂ ಆಗಿದ್ದಿತು. ಈ ಅರಬಿ ಭಾಷೆಯ ಮುಖಾಂತರವೇ ಆ ಕಾಲದ ವಿದ್ಯಾಭ್ಯಾಸವು ಸಾಗುತಿದ್ದಿತು. ರಸಾಯನಶಾಸ್ತ್ರ, ತತ್ವಶಾಸ್ತ್ರ, ವ್ಯಾಕರಣ ಮತ್ತು ಗಣಿತ ಹಾಗೂ ವೇದಶಾಸ್ತ್ರ (ಖುರಾನ್) ಇವೆಲ್ಲವೂ ಅರಬಿ ಭಾಷೆಯಲ್ಲೇ ಬರೆಯಲ್ಪಟ್ಟಿದ್ದುವು. ವಿದ್ಯಾವಂತರಾದ ಸಾಮಾಜಿಕರು ಪಾರ್ಸಿಭಾಷೆಯನ್ನೂ ಕಲಿತುಕೊಳ್ಳುತಿದ್ದರು.

ಆ ಕಾಲದಲ್ಲಿ ಮುಸಲ್ಮಾನ ವಿದ್ಯಾವಂತರೆಲ್ಲರೂ 'ಮಕ್ಕ (Mecca)ಕ್ಕೆ ಯಾತ್ರೆ ಹೋಗುವ ಪದ್ಧತಿಯಿದ್ದಿತು; ಇದರಿಂದಲೆ ತಮ್ಮ ಪ್ರೌಢವಿದ್ಯಾಭ್ಯಾಸವು ಪೂರ್ತಿಯಾಗುವುದೆಂಬುದಾಗಿ ಅವರ ನಂಬುಗೆ ಇದ್ದಿತು. ಹಾಗೆ ಮಕ್ಕಕ್ಕೆ ಹೋಗಿ ಬಂದ ವಿದ್ವಾಂಸರಿಗೆ ಹಿಂದೂ ದೇಶದಲ್ಲಿ ಬಹಳ ಮರ್ಯಾದೆ ಇದ್ದಿತು. ರಾಜಕುಮಾರರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಇಂಥಾ ವಿದ್ವಾಂಸರಿಂದಲೇ ಗುರುಗಳನ್ನು ಆರಿಸುತಿದ್ದರು.

ಮುಸಲ್ಮಾನ ಸ್ತ್ರೀಯರೂ ವಿದ್ಯಾವಂತೆಯರಾಗಿದ್ದರು; ಮುಖ್ಯವಾಗಿ ಮೊಗಲರ ರಾಜ್ಯಭಾರದಲ್ಲಿ ಅರಮನೆಯಲ್ಲಿ ರಾಜಕನ್ನಿಕೆಯರಿಗೆ ವಿದ್ಯೆ ಹೇಳಿಕೊಡುವುದಕ್ಕೆ ವಿದ್ಯಾವಂತಿಯರಾದ ಸ್ತ್ರೀಯರನ್ನು ಬಾದಶಹರು ನೇಮಿಸುತಿದ್ದರು. ಅವರು ರಾಜಕನ್ನಿಕೆಯರಿಗೆ ತಕ್ಕುದಾದ ವಿದ್ಯೆಗಳನ್ನೇ ಹೇಳಿಕೊಡುತಿದ್ದರು. ಪ್ರತಿಯೊಬ್ಬ ಕನ್ನಿಕೆಯೂ ಖುರಾನವನ್ನು ಬಾಯಿಪಾಠ ಕಲಿಯುತಿದ್ದಳು.

ಇಂತಹ ಮುಸಲ್ಮಾನ ರಾಜಕನ್ನಿಕೆಯರು ಸಾಹಿತ್ಯರಚನೆಯಲ್ಲಿ ಅದ್ಭುತ ಪಾಂಡಿತ್ಯವನ್ನು ತೋರಿಸಿರುವರು. ಉದಾಹರಣೆಗಾಗಿ ಅಕ್ಬರ ಬಾದಶಹನ ಒಬ್ಬ ಹೆಂಡತಿಯಾದ 'ಮಕ್ಫಿ'ಯೂ ಅವರಂಗಜೇಬ ಬಾದಶಹನ ಮಗಳಾದ ಜೇಬುನ್ನೀಸಳೂ, ಶಹಆಲ್‌ಮನ Iನೆ ಹೆಂಡತಿಯಾದ 'ನೂರುನ್ನೀಸ'ಳೂ ಅತ್ಯಂತ ಖ್ಯಾತಿಪಟ್ಟವರಾಗಿದ್ದರು. ಅದರಲ್ಲಿಯೂ ಅವರಂಗಜೇಬನ ಮಗಳಾದ ಜೇಬುನ್ನೀಸಳ ಸಂಗತಿಯು ಎಲ್ಲರಿಗೂ ತಿಳಿದ ವಿಷಯವೇ.

ರಾಜಕನ್ನಿಕೆಯರ ವಿದ್ಯಾಭ್ಯಾಸದಂತೆ ಇತರ ಐಶ್ವರ್ಯವಂತ ಕನ್ನಿಕೆಯರ ವಿದ್ಯಾಭ್ಯಾಸ ಕ್ರಮವಾದರೂ ಸಾಗುತಿದ್ದಿತು. ಆದರೆ ಮಧ್ಯಮ ತರಗತಿಯ

Digitized by ROJA MUTHIAH RESEARCH LIBRARY

ಜನರ ಕನ್ನಿಕೆಯರೂ ಬಡವರ ಕನ್ನಿಕೆಯರೂ ಪ್ರಾಯಶಃ ವಿದ್ಯಾಭ್ಯಾಸವನ್ನು ಹೊಂದುತಿದ್ದಿಲ್ಲ.

ಪ್ರಾಚೀನ ಕಾಲದ ಹಿಂದೂ ವಿದ್ವಾಂಸರಲ್ಲಿ ಕವಿಗಳಿದ್ದಂತೆ ಮುಸಲ್ಮಾನರಲ್ಲಾದರೂ ಕವಿಗಳಿದ್ದರು. ಈ ಕವಿಗಳು ಸ್ವಭಾವತಃ ಒಂದೇ ತರದ ಹುದ್ದೆಯವರಾಗಲೀ ಒಂದೇ ಕುಲದವರಾಗಲೀ ಇದ್ದಿಲ್ಲ. ಇವರು ಸಮಯ ಒದಗಿದಾಗ ಬೇರೆ ಬೇರೆ ವಿಷಯವಾಗಿ ಕವಿತೆಗಳನ್ನು ರಚಿಸಿ ಜನರಿಗೆ ತತ್ವಗಳನ್ನು ಬೋಧಿಸುತಿದ್ದರು.

ಮುಸಲ್ಮಾನರ ಕಾಲದಲ್ಲಿ ಹಿಂದೂದೇಶದಲ್ಲಿ ಕಲಾಕೌಶಲ್ಯವೂ ಕೈಗಾರಿಕೆಯೂ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದ್ದುವು. ವಿಚಿತ್ರ ತರದ ಶಿಲ್ಪಿಕಲೆಯೂ ಚಿತ್ರಕಲೆಯೂ, ನೇಯಿಗೆಯೂ, ಮಣ್ಣಿನ ವೃತ್ತಿಯೂ ವಿಶೇಷ ಅಭಿವೃದ್ಧಿ ಹೊಂದಿ ಇದ್ದುವು. ಕೈಗಾರಿಕೆಯಲ್ಲೂ ಕೂಡಾ ಅನೇಕ ತರದ ಸಾಮಾನುಗಳು ಇಲ್ಲಿ ತಯಾರಾಗುತಿದ್ದು ಬೇರೆ ದೇಶಗಳಿಗೂ ಕಳುಹಲ್ಪಡುತಿದ್ದುವು. ಆದರೆ ಇದೇ ತರದ ಕಲಾಕೌಶಲ್ಯವೂ ಕೈಗಾರಿಕೆಯೂ ಬಹಳ ಪೂರ್ವದಲ್ಲಿ ಹಿಂದೂ ಆರ್ಯರ ಕಾಲದಲ್ಲೇ ಅಭಿವೃದ್ಧಿಯಲ್ಲಿದ್ದಿತೆಂಬುದನ್ನು ನಾವು ಮರೆಯಲಾಗದು.

ಹೀಗೆ ಮುಸಲ್ಮಾನರ ಆಳ್ವಿಕೆಯ ಕಾಲದಲ್ಲಿ ಹಿಂದೂದೇಶದ ವಿದ್ಯಾಭ್ಯಾಸವು ಕುಂಟುಗಾಲಿಕ್ಕುತ್ತ ಮೆಲ್ಲನೆ ಸಾಗಿತು. ಪೂರ್ವದಲ್ಲಿದ್ದ ಹಿಂದೂ ವಿದ್ಯಾಬಲವು ಮೆಲ್ಲನೆ ಕುಂದುತ್ತಾ ಬಂದು ಕೊನೆಗೆ ಹಿಂದೂ ಪ್ರೌಢವಿದ್ಯೆಯ ಹೆಸರುಳಿಯದಂತೆ ಆಯಿತು? ಆಹಾ, ಆ ಮೇಲೆ?

---



## ನಾಲ್ಕನೆಯ ಪ್ರಕರಣ

### ಈಗಿನ ಇಂಗ್ಲಿಷು ವಿದ್ಯಾಭ್ಯಾಸ ಕ್ರಮ.

Train up a child in the way he should go.,
And when he is old, he will not depart from it.'

ಇಂಗ್ಲಿಷರು ಹಿಂದೂದೇಶದಲ್ಲಿ ರಾಜ್ಯಭಾರ ಮಾಡಲು ತೊಡಗಿದ ತರುವಾಯ, ಮುಸಲ್ಮಾನರ ಹಾಗೂ ಹಿಂದೂ ಆರ್ಯರ ಪೂರ್ವ ವಿದ್ಯಾಭ್ಯಾಸ ಕ್ರಮಗಳು ಮಾಯವಾದುವು; ಅವುಗಳ ಬದಲಿಗೆ ಇಂಗ್ಲಿಷರ ನವೀನ ವಿದ್ಯಾಪ್ರಚಾರ ಕ್ರಮವು ಪ್ರಾರಂಭವಾಯಿತು. ಹಿಂದೂ ಜನರ ಗುರುಕುಲಗಳೂ ಮುಸಲ್ಮಾನರ ಮಖ್ತಬ್‌ಗಳೂ ಪ್ರಾಧಾನ್ಯವನ್ನು ತೊರೆದುವು.

ಮೊತ್ತಮೊದಲು ಹಳ್ಳಿಗಳಲ್ಲಿ ಪ್ರಾಥಮಿಕ ಪಾಠಶಾಲೆಗಳನ್ನೂ ಅನಂತರ ಪಟ್ಟಣಗಳಲ್ಲಿ ಸೆಕೆಂಡರಿ ಸ್ಕೂಲು ಹೈಸ್ಕೂಲುಗಳನ್ನೂ ಸ್ಥಾಪಿಸಿದರು. ಪ್ರಾಥಮಿಕ ಶಾಲೆಗಳಲ್ಲಿ ಆಯಾ ದೇಶಭಾಷೆಯಲ್ಲೇ ವಿದ್ಯೆ ಕಲಿಸಿಕೊಡಲು ದೇಶಿಯ ಉಪಾಧ್ಯಾಯರನ್ನು ನೇಮಕಮಾಡಿದರು. ಹಳ್ಳಿಯ ಬಾಲಕ ಬಾಲಕಿಯರೆಲ್ಲರೂ ಈ ಪಾಠಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದತೊಡಗಿದರು. ಅವರಲ್ಲಿ ಧನವಂತರ ಮಕ್ಕಳು ರಾಜಭಾಷೆಯಾದ ಇಂಗ್ಲಿಷನ್ನು ಕಲಿಯುವುದಕ್ಕೆ ಪಟ್ಟಣಕ್ಕೆ ಬರತೊಡಗಿದರು. ಇಷ್ಟಾದ ಮೇಲೆ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಕೊಲೇಜುಗಳು (ಪ್ರೌಢವಿದ್ಯಾಲಯಗಳು) ಸ್ಥಾಪಿತವಾದುವು. ಇದರಿಂದ ದೇಶದಲ್ಲಿ ಪ್ರೌಢವಿದ್ಯಾಭ್ಯಾಸ ಪ್ರಚಾರಕ್ಕೆ ಎಡೆಕೊಟ್ಟಂತಾಯಿತು. ಇಡೀ ಸಂಸ್ಥಾನದ ಮುಖ್ಯ ರಾಜಧಾನಿಯಲ್ಲಿ ಒಂದು ವಿಶ್ವವಿದ್ಯಾಲಯವು ಸ್ಥಾಪಿತವಾಯಿತು. ಈ ವಿಶ್ವವಿದ್ಯಾಲಯದ (University) ಕೈಕೆಳಗೆ ಸಂಸ್ಥಾನದಲ್ಲಿನ ಉಳಿದ ವಿದ್ಯಾಲಯಗಳಾದುವು.

ಇದೇ ಕ್ರಮವು ಈಗಲೂ ಕೂಡ ಇದೆ. ಕಾಲೇಜುಗಳಲ್ಲಿ ಬಿ. ಎ., ಎಮ್. ಎ., ಮುಂತಾದ ಬಿರುದುಗಳನ್ನು ಪಡೆಯಬಹುದಾದ ಕ್ಲಾಸುಗಳಿವೆ. ಇವುಗಳಲ್ಲಿ ಕಲಿತು ತೇರ್ಗಡೆ ಹೊಂದಿದರೆ ವಿಶ್ವವಿದ್ಯಾಲಯದವರು ಅವರವರ ಕಲಿಯುವಿಕೆಗೆ ತಕ್ಕಂತೆ ಬಿರುದುಗಳನ್ನು ಕೊಡುವರು. ಪ್ರಸ್ತುತ ಕಾಲದ ವಿದ್ವಾಂಸರೆಂದರೆ ಕೇವಲ ಬಿ. ಎ., ಎಮ್. ಎ., ಮೊದಲಾದ ಪದವೀಧರರು. ದೇಶಿಯ ವಿದ್ಯಾಭ್ಯಾಸದಲ್ಲಿ ಪಾಂಡಿತ್ಯವನ್ನು ಹೊಂದಿದವರಿಗೆ ಬಹುಮಾನ ನಾಸ್ತಿ!

ಇಂಗ್ಲಿಷರ ಈ ನವೀನ ಪದ್ಧತಿಯ ವಿದ್ಯಾಭ್ಯಾಸ ಕ್ರಮದಿಂದ ನಮಗೆ ಹಲಕೆಲವು ಪ್ರಯೋಜನವಾಗುವಂತಿದ್ದರೂ, ಇನ್ನೂ ಹಲ ಕೆಲವು ದೋಷಗಳಿವೆ.

Digitized by ROJA MUTHIAH RESEARCH LIBRARY

ಅವುಗಳನ್ನು ಇಲ್ಲಿ ಸಂಕ್ಷೇಪವಾಗಿ ಸೂಚಿಸಿ, ನನ್ನೀ ಪುಸ್ತಕವನ್ನು ಪೂರ್ತಿಗೊಳಿಸುವೆನು:—

ಮೊದಲನೆಯದಾಗಿ, ಈಗಿನ ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗಿ ಇರುವುದಿಲ್ಲ. ಮಾತ್ರವಲ್ಲದೆ 'ಮಾಫಿ'ಯಾಗಿಯೂ ಇರುವುದಿಲ್ಲ. ಒಬ್ಬ ಹಳ್ಳಿಯವನು ಬಡವನಾಗಿದ್ದರೆ, ಅವನು ಸ್ವಂತ ವೆಚ್ಚಮಾಡಿ ಶಿಕ್ಷಣವನ್ನು ಹೊಂದಬೇಕಾಗುತ್ತದೆ. ಇದು ಬಹುತರ ಎಲ್ಲರಿಗೂ ಸಾಧ್ಯವಿಲ್ಲ.

ಎರಡನೆಯದಾಗಿ, ಈಗಿನ ಇಂಗ್ಲಿಷು ವಿದ್ಯಾಲಯಗಳಲ್ಲಿ ದೇಶಭಾಷೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇರುವುದಿಲ್ಲ. ಇದರಿಂದ ದೇಶಭಾಷೆಯು ಕೇವಲ ದುಃಸ್ಥಿತಿಗೆ ಬಂದುಬಿಡುವ ಸಂಭವವಿದೆ. ವಿದ್ಯಾಲಯಗಳೆಲ್ಲವೂ ಪಟ್ಟಣಗಳಲ್ಲೇ ಇರುವುದರಿಂದ, ಹಳ್ಳಿಯ ಜನರಿಗೆ ಪ್ರೌಢವಿದ್ಯಾಭ್ಯಾಸಕ್ಕೆ ಹೆಚ್ಚು ವೆಚ್ಚವಾಗುತ್ತಿದೆ. ಆದುದರಿಂದ ಸಾಮಾನ್ಯರಾದವರಿಗೆ ಆಂಗ್ಲೇಯ ಪ್ರೌಢವಿದ್ಯಾಭ್ಯಾಸವು ದೊರಕುವ ಸಂಭವವಿಲ್ಲ.

ಮೂರನೆಯದಾಗಿ, ಈಗಿನ ವಿದ್ಯಾಲಯಗಳಲ್ಲಿ ಕಲಾಭಿವೃದ್ಧಿಗೂ ಕೈಗಾರಿಕೆಗಳ ಅಭಿವೃದ್ಧಿಗೂ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿಲ್ಲ. ಇದರಿಂದ ಈ ವಿದ್ಯಾಲಯಗಳಲ್ಲಿ ಕಲಿತ ವಿದ್ಯಾರ್ಥಿಗಳು ತಮ್ಮ ಜೀವನಕಾಲದಲ್ಲಿ ಯಾವ ಕೈಗಾರಿಕೆಯನ್ನೂ ಕೈಕೊಳ್ಳಲಾರದೆ, ಹೊಟ್ಟೆಬಟ್ಟೆಗೆಗತಿಯಿಲ್ಲದೆ ಕಷ್ಟಪಡಬೇಕಾಗಿ ಬರುವುದು. ಮನುಷ್ಯನಿಗೆ ಯಾವುದಾದರೊಂದು ತರದ ಕಲಾಜ್ಞಾನವು ಇರತಕ್ಕುದೆಂದು ಬಲ್ಲವರು ಹೇಳುವರು. ಆದರೆ ಈ ಕಾಲದಲ್ಲಿ ಆ ಮಾತಿನ ಸತ್ಯಾಂಶವು ತೋರಿಬರುವುದಿಲ್ಲ.

ನಾಲ್ಕನೆಯದಾಗಿ, ಈ ಪ್ರೌಢವಿದ್ಯಾಲಯಗಳ ಸಂಬಂಧದಿಂದ ಊರ ವಿದ್ಯಾರ್ಥಿಗಳು ನಾನಾ ತರದ ವಿದೇಶಿಯ ಅಂದರೆ ನಮ್ಮ ದೇಶಾಭಿಮಾನಕ್ಕೆ ಅಯೋಗ್ಯವಾದಂಥ ಆಚಾರಗಳನ್ನು ಕಲಿತುಕೊಳ್ಳುವರು. ಇದಕ್ಕೋಸ್ಕರ ನಮ್ಮ ಹಿಂದೂಧರ್ಮ ನೀತಿಶಿಕ್ಷಣವನ್ನು ಕಲಿಸುವುದು ಉಚಿತವಿದ್ದರೂ ಈಗ ಅದನ್ನು ಅಲ್ಲಗಳೆಯುತ್ತಿರುವರು.

ಐದನೆಯದಾಗಿ, ಸಂಸ್ಕೃತ ಭಾಷಾಪ್ರಸಾರವನ್ನು ಇನ್ನೂ ಹೆಚ್ಚುಮಾಡತಕ್ಕುದು. ಹಿಂದೂ ಆರ್ಯರ ಸರ್ವ ಗ್ರಂಥಗಳೂ ಸಂಸ್ಕೃತ ಭಾಷೆಯಲ್ಲಿರುತ್ತವೆ. ಈಗಿನ ವಿದ್ಯಾರ್ಥಿಗಳು ಅವುಗಳನ್ನು ಉಪಯೋಗ ಮಾಡಿಕೊಳ್ಳುವಂತೆ ಅವರಿಗೆ ಸಂಸ್ಕೃತ ಭಾಷಾಭ್ಯಾಸವನ್ನು ಮಾಡಿಸುವುದು ಉಚಿತವಾದರೂ ಈಗ ಅದನ್ನು ಹೆಚ್ಚಿನ ಮಟ್ಟಿಗೆ ಅಲ್ಲಗಳೆಯುತ್ತಿರುವರು.

ಇವುಗಳಲ್ಲದೆ ಇನ್ನೂ ಹಲವು (ಸಣ್ಣ ಪುಟ್ಟ) ದೋಷಗಳಿವೆ. ಅವುಗಳನ್ನು ವ್ಯಾಖ್ಯಾನ ಮಾಡತೊಡಗಿದರೆ ಪುಸ್ತಕವು ದೊಡ್ಡದಾಗುವುದು. ಆದುದರಿಂದ ಉಳಿದ ವಿಷಯಗಳನ್ನು ನೀವೇ ಪರಾಂಬರಿಸಿಕೊಳ್ಳಿರಿ.



ಇವುಗಳಲ್ಲದೆ ಇತರ ವಿಷಯಗಳಲ್ಲಿ ಇಂಗ್ಲಿಷು ವಿದ್ಯಾಭ್ಯಾಸಕ್ರಮವು ಕೇವಲ ಒಳ್ಳೇ ತರದ್ದೇ ಇರುವುದು. ಮೇಲೆ ಹೇಳಿದ ದೋಷಗಳನ್ನು ನೀಗಿ, ಸೂಚನೆಗಳನ್ನು ಕೈಕೊಂಡರೆ ಇಂಗ್ಲಿಷುವಿದ್ಯಾಲಯಗಳು ಲೋಕದ ವಿದ್ಯಾಮಂದಿರಗಳಲ್ಲಿ ಮೊದಲನೆ ಸ್ಥಾನವನ್ನು ಪಡೆಯುವವು; ಆದರೆ ಇವುಗಳಲ್ಲಿ 'ವರ್ಣದ್ವೇಷ'ವು (Race hatred) ಮೊಳೆತರೆ ಒಂದಕ್ಕೊಂದಾಗಿ ಸಂಭವಿಸುವುದು. ದುದರಿಂದ 'ವರ್ಣದ್ವೇಷ'ವೆಂಬ ಕೆಟ್ಟ ಪಿಶಾಚನನ್ನು ಇಂಗ್ಲಿಷು ವಿದ್ಯಾಮಂದಿರ ಿಂದ ಹೊರಗೆ ದೂಡಿಬಿಡಬೇಕು. ಆದರೆ ಮಾತ್ರವೇ ಸತ್ಕೀರ್ತಿಗೆ ದಾರಿ ಗುವುದು!

ಲೋಕದಲ್ಲಿ ಮತ್ತೊಮ್ಮೆ ಶಾಂತಿಯು ನೆಲೆಗೊಳ್ಳಲಿ! ಅವಿದ್ಯಾವಂತರೆಲ್ಲರೂ ವಂತರಾಗಿ ಬಾಳಲಿ. ಸಜ್ಜನರು ನಿರ್ಭಯವಾಗಿ ತಂತಮ್ಮ ಸದ್ವೃತ್ತಿಗಳನ್ನು ತ್ತ ಸುಖದಿಂದ ಬಾಳಿರಲಿ. ಹಿಂದೂ ಜನಾಂಗವು ಇನ್ನೊಮ್ಮೆ ತನ್ನ ಪೂರ್ವದ ನಾಗರಿಕತೆಯನ್ನು ಪಡೆದು ಕೀರ್ತಿಗೆ ನೆರವಾಗಲಿ! ನಿಮ್ಮ ಕರ್ತವ್ಯವನ್ನು ನೀವು ಮಾಡುತ್ತೀರಿ; ನಮ್ಮದನ್ನು ನಾವು ಮಾಡಿ ಜನ್ಮಸಾರ್ಥಕ ಮಾಡಿಕೊಳ್ಳುವೆವು. ಭಗವಂತನು ನಮ್ಮೆಲ್ಲರನ್ನು ಕಾಪಾಡಲಿ!

ಓಂ ಶಾಂತಿಃ ಶಾಂತಿಃ ಶಾಂತಿಃ!

॥ ಸಂಪೂರ್ಣಂ ॥

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY